CC-O. In Public Domain. Digitized by eGangotri

ಡಿ.ಸಿ. ಶಿವರಾಜಯ್ಯ

ಅರಸೀಕೆರೆ ತಾಲ್ಲೂಕು ದರ್ಶನ



Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ನಾಟಕ ಪ್ರಗತಿಯ ಮುನ್ನಡೆ – ೧೬

ಅರಸೀಕೆರೆ

ತಾಲ್ಲೂಕು ದರ್ಶನ

ಹೀ. ಚಿ. ಶಾಂತವೀರಯ್ಯ

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

Sri Vidyabharathi Book Centre, Sringeri

CC-O. In Public Domain. Digitized by eGangotri

ARASIKERE TALUKU DARSHANA — a monograph on Arasikere Taluk written by H. C. Shanthaveeraiah and Published by G. K. Ananthram for IBH Prakashana Fifth Main Road Gandhinagar Bangalore 560 009.

ಬೆಲೆ : ರೂ. 3-75

© ಪ್ರಕಾಶಕರು 1986

ಚಿತ್ರಗಳು : ಸೂರ್ಯ ಸ್ಟುಡಿಯೋ, ಅರಸೀಕೆರೆ ಮತ್ತು ಬಿ. ಕೆ. ಕೇಸರ್‌ಸಿಂಗ್, ಬೆಂಗಳೂರು

ಮೊದಲ ಮುದ್ರಣ : 1986. ಪ್ರಕಾಶಕರು : ಐಬಿಎಚ್ ಪ್ರಕಾಶನ ಇವರ ಪರವಾಗಿ ಜಿ. ಕೆ. ಅನಂತರಾಮ್ ಐದನೆಯ ಮುಖ್ಯರಸ್ತೆ ಗಾಂಧಿನಗರ ಬೆಂಗಳೂರು 560 009. ಮುದ್ರಕರು : ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು 560 054.

Sri Vidyabharathi Book Centre, Sringeri

CC-O. In Public Domain. Digitized by eGangotri

ಅರಸೀಕೆರೆ ತಾಲ್ಲೂಕು ದರ್ಶನ

ಭೌಗೋಳಿಕ ಪರಿಚಯ

ಹಾಸನ ಜಿಲ್ಲೆಯಲ್ಲಿ ಎಂಟು ತಾಲ್ಲೂಕುಗಳಿದ್ದು ಅಲ್ಲಿನ ಅನೇಕ ಸ್ಥಳಗಳು ಪುರಾಣ ಪ್ರಸಿದ್ಧವೂ, ಇತಿಹಾಸ ಪ್ರಸಿದ್ಧವೂ ಆಗಿವೆ. ಜಗತ್ಪ್ರಸಿದ್ಧವಾದ ಗೊಮ್ಮಟೇಶ್ವರ ವಿಗ್ರಹ, ಬೇಲೂರು ಹಳೇಬೀಡುಗಳಲ್ಲಿನ ದೇವಾಲಯಗಳು, ದಕ್ಷಿಣ ಕಾಶಿ ಎಂದು ಸ್ಥಳೀಯರು ವರ್ಣಿಸುವ ರಾಮನಾಥಪುರ, ಕಾಫಿ ಏಲಕ್ಕಿ ತೋಟ ಗಳಿಗೆ ಹೆಸರಾದ ಸಕಲೇಶಪುರ, ವ್ಯಾಪಾರ ಕೇಂದ್ರವಾಗಿರುವ ಅರಸೀಕೆರೆ ಇವೇ ಮೊದಲಾದ ಸ್ಥಳಗಳು ಈ ಜಿಲ್ಲೆಗೆ ವಿಶೇಷತೆ ಯನ್ನು ತಂದಿವೆ. ಹಾಸನ ಜಿಲ್ಲೆಯ ತಾಲ್ಲೂಕುಗಳಲ್ಲಿ ಅರಸೀ ಕೆರೆಯೂ ಒಂದು.

ಹಾಸನ ಜಿಲ್ಲೆಯಲ್ಲಿ ವಿಸ್ತಾರದಲ್ಲಿ ಮೊದಲನೆಯದೂ, ಜನಸಂಖ್ಯೆಯ ದೃಷ್ಟಿಯಿಂದ ಎರಡನೆಯದೂ ಆಗಿರುವ ಅರಸೀ ಕೆರೆ ತಾಲ್ಲೂಕನ್ನು ದಕ್ಷಿಣದಲ್ಲಿ ಹಾಸನ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳು, ಉತ್ತರದಲ್ಲಿ ಚಿಕ್ಕಮಗಳೂರು ಜಿಲ್ಲೆ, ಪೂರ್ವದಲ್ಲಿ ತಿಪಟೂರು ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳು, ಪಶ್ಚಿಮ ದಲ್ಲಿ ಬೇಲೂರು ಮತ್ತು ಚಿಕ್ಕಮಗಳೂರು ತಾಲ್ಲೂಕುಗಳು ಸುತ್ತು ವರೆದಿದ್ದು ಇವು ತಾಲ್ಲೂಕಿನ ಮೇರೆಗಳಾಗಿವೆ.

ಅರಸೀಕೆರೆ ತಾಲ್ಲೂಕಿನ ವಿಸ್ತೀರ್ಣ 1227.24 ಚದರ ಕಿಲೋ ಮೀಟರುಗಳು. 1981ರ ಜನಗಣತಿಯ ಪ್ರಕಾರ ಇಲ್ಲಿನ

Sri Vidyabharathi Book Centre, Sringeri

 CC-O. In Public Domain. Digitized by eGangotri

ಜನಸಂಖ್ಯೆ 2,55,226. ಇದರಲ್ಲಿ ಗಂಡಸರ ಸಂಖ್ಯೆ 1,29,667 ಹಾಗೂ ಹೆಂಗಸರ ಸಂಖ್ಯೆ 1,25,559. ಗ್ರಾಮೀಣ ಪ್ರದೇಶದ ಜನಸಂಖ್ಯೆ 2,23,274 ಮತ್ತು ನಗರ ಪ್ರದೇಶದ ಜನಸಂಖ್ಯೆ 31,952 ಇರುತ್ತದೆ. ಈ ತಾಲ್ಲೂಕಿನಲ್ಲಿ 41,272 ಹರಿಜನರೂ, 3063 ಗಿರಿಜನರೂ ಇರುತ್ತಾರೆ. ಈ ತಾಲ್ಲೂಕಿನಲ್ಲಿ ಒಟ್ಟು 369 ಹಳ್ಳಿಗಳಿದ್ದು 332 ಹಳ್ಳಿಗಳಲ್ಲಿ ಜನವಸತಿ ಇರುತ್ತದೆ. ಈ ತಾಲ್ಲೂಕಿನಲ್ಲಿ ಹಿಂದೂಗಳ ಸಂಖ್ಯೆ ಹೆಚ್ಚಾಗಿರುತ್ತದೆ. ಕ್ರೈಸ್ತರು, ಮುಸ್ಲಿಮರೂ ಇರುತ್ತಾರೆ. ಲಿಂಗಾಯತರು, ಅಗಸರು, ಬಣಜಿಗರು, ಬೇಡರು, ಬೆಸ್ತರು, ದೇವಾಂಗರು, ಗಾಣಿಗರು, ಈಡಿಗರು, ಕುರುಬರು, ಕುಂಬಾರರು, ನಾಯಿಂದರು, ಉಪ್ಪಾರರು, ಒಕ್ಕಲಿಗರು, ಪಡ್ಡರೇ ಮೊದಲಾದ ಜಾತಿಗಳು ಹಿಂದೂಗಳಲ್ಲಿ ಇವೆ ಎನ್ನಬಹುದು.

ಇಲ್ಲಿನ ಬಹುಜನರ ಭಾಷೆ ಕನ್ನಡ. ಉರ್ದು, ತಮಿಳು, ತೆಲುಗು, ತುಳು, ಮಲಯಾಳ, ಮರಾಠಿ, ಕೊಂಕಣಿ, ಗುಜರಾತಿ, ಕೊಡಗು ಮುಂತಾದ ಭಾಷೆಯನ್ನು ಮಾತನಾಡುವವರೂ ಇರುತ್ತಾರೆ.

ಹವಾಗುಣ, ಮಳೆ

ಈ ತಾಲ್ಲೂಕಿನ ಹವಾಗುಣ ಹಿತಕರವಾಗಿರುತ್ತದೆ. ಹೆಚ್ಚು ವೈಪರೀತ್ಯದ ಹವೆ ಇರುವುದಿಲ್ಲ. ಮಾರ್ಚಿಯಿಂದ ಮೇವರೆಗೆ ಬೇಸಿಗೆ ಕಾಲವಿದ್ದು ಈ ಕಾಲದಲ್ಲಿ ಸೆಕೆ ಹೆಚ್ಚು. ಬಿಸಿಲಿನ ಝಳ ಜೋರು. ಜೂನ್ ತಿಂಗಳಿಂದ ಅಕ್ಟೋಬರ್‌ವರೆಗೆ ಮಳೆಗಾಲವಿರುತ್ತದೆ. ತಂಪಾದ ಹವೆ ಇರುತ್ತದೆ. ನವೆಂಬರ್, ಡಿಸೆಂಬರ್ ಹಾಗೂ ಜನವರಿ ತಿಂಗಳುಗಳಲ್ಲಿ ಚಳಿ ಹೆಚ್ಚು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ತಾಲ್ಲೂಕು ಅರ್ಧ ಮಲೆನಾಡು ಪ್ರದೇಶವನ್ನೊಳ ಗೊಂಡಿದ್ದು. ಉಳಿದ ಪ್ರದೇಶ ಬಯಲುಸೀಮೆಯಾಗಿದೆ. ಇಲ್ಲಿನ ವಾಡಿಕೆ ಮಳೆ ಪ್ರಮಾಣ 673.1 ಮಿ.ಮೀ.ಗಳು. ವಾಸ್ತವಿಕ ಸರಾಸರಿ ಮಳೆ 487.7 ಮಿ.ಮೀ.ಗಳು. ಈ ತಾಲ್ಲೂಕಿನಲ್ಲಿ ಮಳೆ ಕಡಿಮೆ ಎನ್ನಬಹುದು. ಅರಸೀಕೆರೆ, ಬಾಣಾವರ, ಕಣಕಟ್ಟೆ, ಗಂಡಸಿ ಈ ಮೊದಲಾದ ಕೇಂದ್ರಗಳಲ್ಲಿ ಮಳೆ ಪರಿಮಾಣವನ್ನು ಅಳೆಯುವ ವ್ಯವಸ್ಥೆ ಇರುತ್ತದೆ. ಒಟ್ಟು ಏಳು ವೃಷ್ಟಿಮಾಪಕ ಕೇಂದ್ರಗಳು ಈ ತಾಲ್ಲೂಕಿನಲ್ಲಿ ಇರುತ್ತವೆ.

ಆಡಳಿತಾನುಕೂಲಕ್ಕಾಗಿ ಈ ತಾಲ್ಲೂಕನ್ನು ಐದು ಹೋಬಳಿ ಗಳನ್ನಾಗಿ ವಿಂಗಡಿಸಲಾಗಿದೆ. ಅರಸೀಕೆರೆ, ಗಂಡಸಿ, ಜಾವಗಲ್ಲು, ಬಾಣಾವರ ಮತ್ತು ಕಣಕಟ್ಟೆ ಇವು ಈ ಐದು ಹೋಬಳಿಗಳು. ಈ ತಾಲ್ಲೂಕಿನ ಪಟ್ಟಣಗಳ ಸಂಖ್ಯೆ ಎರಡು.

ನದಿ-ಬೆಟ್ಟ-ಕಾಡು

ಈ ತಾಲ್ಲೂಕಿನಲ್ಲಿ ನದಿಗಳಾವುವೂ ಹರಿಯುವುದಿಲ್ಲ. ಅಲ್ಲಲ್ಲಿ ಸಣ್ಣ ಪುಟ್ಟ ಹಳ್ಳಗಳು ಇರುತ್ತವೆ. ಇಲ್ಲಿನ ಜಲಸಂಪನ್ಮೂಲ ಗಳೆಂದರೆ ಕೆರೆಗಳು. ಸುಮಾರು 85 ಕೆರೆಗಳು ಈ ತಾಲ್ಲೂಕಿನಲ್ಲಿರು ತ್ತವೆ. ಸ್ವಲ್ಪ ದೂರ ವೇದಾವತಿ ನದಿ ಹರಿಯುತ್ತಿದ್ದು ಅರಸೀ ಕೆರೆಗೆ 28 ಕಿ.ಮೀ. ದೂರದಲ್ಲಿ ತಿಮ್ಮನಹಳ್ಳಿಯ ಪಶ್ಚಿಮ ಈ ನದಿಗೆ ಹಿರೇಕಟ್ಟು ಒಡ್ಡು ಎಂಬ ಕಟ್ಟೆ ಕಟ್ಟಲಾಗಿದೆ. ಇಲ್ಲಿಂದ ಹೊರಡುವ ನಾಲೆಗಳಿಂದ ಅರಸೀಕೆರೆ ತಾಲ್ಲೂಕಿಗೆ ನೀರು ಲಭಿಸುತ್ತದೆ.

ಅಲ್ಲಲ್ಲಿ ಕೆರೆಗಳ ಆಶ್ರಯದಿಂದ ಈ ತಾಲ್ಲೂಕಿನಲ್ಲಿ ಬತ್ತವನ್ನು ಬೆಳೆಯಲಾಗುತ್ತದೆ. ಈ ತಾಲ್ಲೂಕಿನಲ್ಲಿ ನೀರಾವರಿ ಬಾವಿಗಳ

Sri Vidyabharathi Book Centre, Sringeri

ಪಾತ್ರ ಗಮನಾರ್ಹ. ಸುಮಾರು 400ಕ್ಕೂ ಹೆಚ್ಚು ನೀರಾವರಿ ಬಾವಿಗಳು ಇರುತ್ತವೆ.

ಅರಸೀಕೆರೆ ತಾಲ್ಲೂಕು ಸುಮಾರು ಬೆಟ್ಟಗುಡ್ಡಗಳ ಪ್ರದೇಶ. ಇಲ್ಲಿನ ಬೆಟ್ಟಗಳಲ್ಲಿ 'ಹಿರೇಕಲ್ಲು ಬೆಟ್ಟ' ಎಂಬುದು ಎತ್ತರವಾದ ಬೆಟ್ಟಗಳಲ್ಲೊಂದು. ಈ ಬೆಟ್ಟ ಸಾಲಿಗೆ 'ಮಾಲೇಕಲ್ ತಿರುಪತಿ' ಎಂಬ ಹೆಸರೂ ಇದ್ದು ಇಲ್ಲಿ ಗುಡ್ಡಗಳ ಮಾಲೆಯನ್ನೇ ಕಾಣ ಬಹುದು. 1,553 ಮೀಟರ್ ಎತ್ತರವಿರುವ ಈ ಬೆಟ್ಟದ ಮೇಲೆ ವೆಂಕಟರಮಣಸ್ವಾಮಿ ದೇವಸ್ಥಾನವಿದೆ. ಈ ತಾಲ್ಲೂಕಿನ ಬಾಣಾವರದ ಈಶಾನ್ಯಕ್ಕೆ 11 ಕಿ.ಮೀ. ದೂರದಲ್ಲಿ ಗರುಡನಗಿರಿ ಎಂಬ ಬೆಟ್ಟವಿದೆ. ಇದು ಸಮುದ್ರ ಮಟ್ಟದಿಂದ 1,057 ಮೀಟರ್ ಎತ್ತರದಲ್ಲಿದೆ. ಇದರ ಮೊದಲನೆ ಹೆಸರು ನೊಳಂಬನ ಕಲ್ಲು. ಮೈಸೂರಿನ ಅರಸರು ಇಲ್ಲಿ 1660ರಲ್ಲಿ ಕೋಟೆ ಕಟ್ಟಿಸಿದಾಗ 'ಗರುಡನಗಿರಿ' ಎಂಬ ಹೆಸರು ಬಂದಿತು. ಬಾಗೇಶಪುರದ ಪಶ್ಚಿಮ ದಲ್ಲಿರುವ ದೊಡ್ಡ ಗುಡ್ಡವೊಂದು ಕಬ್ಬಿಣಾಂಶವಿರುವ ಭಿನ್ನಸ್ತರ ಶಿಲಾಶ್ರೇಣಿಯಿಂದ ಕೂಡಿದೆ.

ಈ ತಾಲ್ಲೂಕಿನ ಅರಣ್ಯಪ್ರದೇಶದ ವಿಸ್ತೀರ್ಣ 15,049 ಹೆಕ್ಟೇರುಗಳು. ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕು ಬಿಟ್ಟರೆ ಈ ತಾಲ್ಲೂಕಿನಲ್ಲಿ ಅರಣ್ಯ ವಿಸ್ತೀರ್ಣ ಹೆಚ್ಚಾಗಿರುತ್ತದೆ. ಉಳಿದ ತಾಲ್ಲೂಕುಗಳಲ್ಲಿ ಅರಣ್ಯಗಳು ಕಡಿಮೆ. ಇಲ್ಲಿನ ಅರಣ್ಯಗಳಲ್ಲಿ ಕುರುಚಲು ಗಿಡಗಳು, ಹುಲ್ಲು ಬೆಳೆದ ಪ್ರದೇಶಗಳೇ ಹೆಚ್ಚು. ತಂಗಡಿ, ಕಕ್ಕೆ, ಬೇವು, ಹೊಂಗೆ ಈ ಮೊದಲಾದ ವೃಕ್ಷಗಳು ಇಲ್ಲಿನ ಕಾಡುಗಳಲ್ಲಿ ಬೆಳೆಯುತ್ತವೆ. ಚಿರತೆ, ತೋಳ, ನರಿ, ಕಾಡು ನಾಯಿ, ಕಾಡುಕೋಣ, ಜಿಂಕೆ ಹಾಗೂ ಹಲವು ತೆರನಾದ ಪಕ್ಷಿ ಗಳನ್ನು ಇಲ್ಲಿ ಕಾಣಬಹುದು. ಇಲ್ಲಿ ಹಾವುಗಳು ವಿಶೇಷವಾಗಿರು ತ್ತವೆ.

CC-O. In Public Domain. Digitized by eGangotri

ಖನಿಜ ಸಂಪನ್ಮೂಲಗಳು

ಅರಸೀಕೆರೆ ತಾಲ್ಲೂಕು ಬಹು ಪುರಾತನವಾದ ಶಿಲಾಸ್ತರ ಗಳಿಂದ ಕೂಡಿದುದಾಗಿದೆ. ಬಾಣಾವರ ಮತ್ತು ಅರಸೀಕೆರೆ ಬಳಿ ಹೊಸ ಕಾಲದ ಗ್ರಾನೈಟ್ ಶಿಲೆಗಳು ಕಂಡುಬಂದಿವೆ. ಪ್ರಿ ಕೆಂಬ್ರಿಯನ್ ಯುಗದ ಶಿಲೆಗಳಿಂದ ಸುತ್ತುವರಿದ ಬಾಗೇಶಪುರ ಪ್ರದೇಶದಲ್ಲಿ ಪದರುಶಿಲೆ ಮತ್ತು ನೈಸ್ ಶಿಲೆಗಳು ಹಾಗೂ ಪದರು ಶಿಲೆಗಳನ್ನು ಭೇದಿಸಿರುವ ಗ್ರಾನೈಟ್ ಶಿಲೆಗಳು ಹೇರಳವಾಗಿವೆ. ಈ ಶಿಲೆಗಳಲ್ಲಿ ಪೆಗ್ಮಾಟೈಟ್ ಶಿಲೆಗಳು ದಿಂಡುಗಳ ರೂಪದಲ್ಲಿ ಅಂತರ್ಗತವಾಗಿವೆ. ಬಿಳಿ ಬಣ್ಣದ ಜೇಡಿಮಣ್ಣು ಅಥವಾ ಚೈನಾ ಮಣ್ಣು ಬಾಗೇಶಪುರದ ಪೂರ್ವ ಮತ್ತು ಪಶ್ಚಿಮದಲ್ಲಿ ಕಂಡು ಬರುತ್ತದೆ. ಬಾಗೇಶಪುರಕ್ಕೆ ಪಶ್ಚಿಮದಲ್ಲಿ ಒಂದೆರಡು ಮೈಲಿ ದೂರದಲ್ಲಿನ ಝರಿಗಳ ತಳಗಳೂ ಜೇಡಿಮಣ್ಣಿನ ಪದರಗಳನ್ನು ಹೊಂದಿವೆ. ಇವನ್ನು ಅಪ್ಪೇನಹಳ್ಳಿ ನಿಕ್ಷೇಪಗಳೆಂದೂ, ಬಾಗೇಶ ಪುರದ ಪೂರ್ವದಲ್ಲಿನ ನಿಕ್ಷೇಪಗಳನ್ನು ನಂದಿಹಳ್ಳಿ ನಿಕ್ಷೇಪಗಳೆಂದೂ ಹೇಳುತ್ತಾರೆ. ಇಲ್ಲಿ ಗಣಿಗಳನ್ನು ತೋಡಲಾಗಿದೆ. ಈ ಗಣಿಗಳಿಂದ ಮೂರು ಲಕ್ಷ ಟನ್‌ಗಳಿಗೂ ಹೆಚ್ಚು ಬಿಳಿ ಜೇಡಿಮಣ್ಣನ್ನು ಹೊರ ತೆಗೆಯಬಹುದೆಂದು ತಿಳಿಯಲಾಗಿದೆ. 1943ರಿಂದಲೂ ಬಿಳಿ ಜೇಡಿಮಣ್ಣನ್ನು ಹೊರ ತೆಗೆಯಲಾಗುತ್ತಿದೆ. ಕೈಗಾರಿಕೆಗಳಿಗೆ ನೆರವಾಗುವ ಈ ಮಣ್ಣು ಒಂದು ಸಂಪನ್ಮೂಲವಾಗಿದೆ. ಅರಸೀಕೆರೆಯ ನೈಋತ್ಯ ದಿಕ್ಕಿಗೆ 16 ಕಿ.ಮೀ. ದೂರದ ಕಲ್ಯಾಡಿ ಎಂಬಲ್ಲಿ ತಾಮ್ರದ ನಿಕ್ಷೇಪಗಳಿರುವುದು ಕಂಡುಬಂದಿದೆ. ಕ್ರೊಮೈಟ್ ಹಾಗೂ ಕೋರಂಡಂ ಇಲ್ಲಿನ ಇತರ ಖನಿಜಗಳು. ಅರಸೀಕೆರೆ ಮತ್ತು ಬಾಣಾವರದ ಸುತ್ತುಮುತ್ತ ಕಟ್ಟಡಕ್ಕೆ ಒದಗಬಲ್ಲ ಗಟ್ಟಿ ಕಲ್ಲುಗಳಿವೆ.

CC-O. In Public Domain. Digitized by eGangotri

ಚರಿತ್ರೆ

ಪುರಾಣ, ಇತಿಹಾಸ

ರಾಮಾಯಣ ಕಾಲದಲ್ಲಿ ಲಕ್ಷ್ಮಣನು ಆಯಾಸದಿಂದ ಹೊರಲಾರದೆ ಕೆಳಗೆ ಹಾಕಹೋಗಿದ್ದ ಬಾಣಗಳನ್ನು ಶ್ರೀರಾಮನು ಎತ್ತಿಕೊಂಡ ಸ್ಥಳವೇ 'ಬಾಣಾವರ' ಆಯಿತೆಂದು ಐತಿಹ್ಯವಿದೆ. ಬಾಣಾವರ ಈ ತಾಲ್ಲೂಕಿನ ಒಂದು ಪಟ್ಟಣವಾಗಿ ಅಭಿವೃದ್ಧಿ ಹೊಂದುತ್ತಿದೆ. ಅರಸೀಕೆರೆ ಮತ್ತು ಬಾಣಾವರದ ಬೆಟ್ಟಗಳ ಸಾಲಿನಲ್ಲಿ ಶಿಲಾಯುಗದ ಲಕ್ಷಣಗಳು ಕಂಡುಬರುತ್ತವೆ. ಕದಂಬರು, ಗಂಗರು, ನೊಳಂಬರು, ಚಾಳುಕ್ಯರು, ಕೊಂಗಾಳ್ವರು, ಹೊಯ್ಸಳರು, ವಿಜಯನಗರ ಮತ್ತು ಮೈಸೂರು ಅರಸರ ಆಳ್ವಿಕೆಯಲ್ಲಿ ಈ ತಾಲ್ಲೂಕು ಇದ್ದುದು ತಿಳಿದುಬಂದಿದೆ. ಹೊಯ್ಸಳರ ಎರಡನೆಯ ಬಲ್ಲಾಳನ ದಂಡನಾಯಕ 'ವಸುಧೈಕಬಾಂಧವ' ರೇಚರಸನು ಇಲ್ಲಿ ಹಲವು ದೇವಾಲಯಗಳನ್ನು ಕಟ್ಟಿಸಿದ್ದಾನೆ. ಕ್ರಿ.ಶ. 11ನೇ ಶತಮಾನದಲ್ಲಿ ಹೊಯ್ಸಳರ ಅರಸಿಯೊಬ್ಬಳು ಅರಸೀಕೆರೆಯಲ್ಲಿನ ಕೆರೆಯನ್ನು ಕಟ್ಟಿಸಿದುದರಿಂದ ಈ ಊರಿಗೆ 'ಅರಸೀಕೆರೆ' ಎಂದು ಹೆಸರು ಬಂದಿರುವುದೆಂದು ಸ್ಥಳ ಪುರಾಣವಿದೆ. ಕನ್ನಡ ನಾಡಿನಲ್ಲಿ ಹಲವಾರು ಅರಸೀಕೆರೆಗಳು ಇರುವುದು ಒಂದು ವಿಶೇಷ. ಪಾವಗಡ, ತರೀಕೆರೆ, ಹರಪನಹಳ್ಳಿ, ಹಾಸನ, ಅರಕಲಗೂಡು ತಾಲ್ಲೂಕುಗಳಲ್ಲಿ ಇದೇ ಹೆಸರಿನ ಊರುಗಳಿವೆ. ಅರಸೀಕೆರೆಯನ್ನು ಹೊಯ್ಸಳ ರಾಜ ಎರೆಯಂಗನ ಪಟ್ಟದರಸಿ ಮಹದೇವಿ ಕಟ್ಟಿಸಿದಳೆನ್ನಲಾಗಿದೆ.

ಅರಸೀಕೆರೆ ತಾಲ್ಲೂಕಿನಲ್ಲಿ ಸುಮಾರು ಇನ್ನೂರೈವತ್ತು ಶಿಲಾಶಾಸನಗಳಿವೆ. ಹೆಚ್ಚು ಶಾಸನಗಳು ಹೊಯ್ಸಳರ ಕಾಲದವಾಗಿವೆ. ಅವು ಬಂದೂರು, ಜಾವಗಲ್ಲು, ಕೋಳಗುಂದ, ಮಾರನಹಳ್ಳಿ,

CC-O. In Public Domain. Digitized by eGangotri

ದೇಶಾಣಿ, ಉಂಡಿಗನಹಾಳು, ಬಾಣಾವರ, ಗಂಜಿಗೆರೆ, ಚಿಕ್ಕ ಕಾರೇಹಳ್ಳಿ, ಶ್ಯಾನೆಗೆರೆ, ಕಲ್ಲುಗುಂಡಿ, ಬೆಂಡೆಕೆರೆ, ಕುರುವಂತ, ಕಣಕಟ್ಟೆ, ಶಂಕರನಹಳ್ಳಿ, ಶಾಂತನಗೆರೆ, ಹೊನ್ನಕಟ್ಟೆ, ಸೊಪ್ಪಿನಹಳ್ಳಿ, ಹೊಳಲಕೆರೆ, ಹಲ್ಕೂರು, ಮಾಡಾಳು, ಕಿತ್ತನಕೆರೆ, ಹಿರೇಕಲ್ಲು, ತಿರುಪತಿ, ಚಲ್ಲಾಪುರ ಮೊದಲಾದ ಕಡೆ ದೊರೆಯುತ್ತವೆ.

ಅರಸೀಕೆರೆಯನ್ನು ಶಾಸನಗಳಲ್ಲಿ ಬಹುವಾಗಿ ಪ್ರಶಂಸಿಸಲಾಗಿದೆ. 'ಸಿರಿಯ ತವರ್ಮನೆ' (ನಾಗಮಂಗಲ 93) ಅರಸೀಕೆರೆಯ ಪಂಚಮಠಾಚಾರ್ಯ ಗುರುಗಳು (ಕಡೂರು 143) ಧರಣೀ ದೇವತೆಗೆ ತಿಳಕಮೆನಿಪುದು ಪುಣ್ಯಕರಮೆನಿಪುದು (ದಾವಣಗೆರೆ 84) ಅರಸೀಕೆರೆಯ ಮಠ ನೈಷ್ಠಿಕ ಮಠ (ಶಿಕಾರಿಪುರ 277) ಹೀಗೆಂದು ಹಲವಾರು ಶಾಸನಗಳಲ್ಲಿ ತಿಳಿಸಲಾಗಿದೆ.

ಅರಸೀಕೆರೆ ಹೊಯ್ಸಳರ ಆರಂಭ ಕಾಲದಲ್ಲಿಯೇ ಹುಟ್ಟಿಕೊಂಡಿತು. ಇಮ್ಮಡಿ ಬಲ್ಲಾಳನ ಕಾಲದಲ್ಲಿ ಈ ಊರು ಪ್ರಗತಿಯನ್ನು ಕಂಡಿತು. ಬಲ್ಲಾಳನ ಹಿರಿಯ ರಾಣಿ ಉಮಾದೇವಿಯ ತವರಾಗಿದ್ದ ಈ ಊರು ಅವನ ಕಾಲದಲ್ಲಿ ಹೊಯ್ಸಳ ರಾಜ್ಯದ 'ಭಂಡಾರವಾಡ'ವಾಯಿತು. ಇದಕ್ಕೆ 'ಜಯಗೊಂಡ ಬಲ್ಲಾಳಪುರ' 'ವೀರವಿಜಯ ಬಲ್ಲಾಳಪುರ' ಎಂಬ ಹೆಸರುಗಳು ಇದ್ದು ಶಾಸನಗಳಲ್ಲಿ 'ರಾಜಧಾನಿ ಅರಸಿಯಕೆರೆ' ಎನಿಸಿಕೊಂಡಿದೆ.

ಶಾಸನಗಳ ಪ್ರಕಾರ ವೇದವಿದರಾದ ವಿಪ್ರರು, ವೀರರು, ಆಢ್ಯರಾದ ಪರದರು, ಅಲಕಾಪುರಿಯ ಕುಬೇರನನ್ನು ಧಿಕ್ಕರಿಸುವ ವಾಣಿಜ್ಯರು, ಅಚಲವಾಕ್ಯರಾದ ಜನರು ಇಳೆಗೆ, ಮುಂಡನಪ್ರಾಯವಾದ ದೇವಾಗಾರ ಸಂದೋಹ, ಸಾಗರ ತೀರದಂತೆ ಶೋಭಿಸುವ ತುಂಬಿರುವ ಕೆರೆಗಳು, ಫಲಭರಿತ ವನಗಳು, ಪುಷ್ಪಭರಿತ ತೋಟಗಳು, ತೆಂಗು ಕೌಂಗುಗಳು, ಗಂಧಶಾಲೀ ಪರಿಮಳಗಳಿಂದ ಕೂಡಿದ ಗದ್ದೆಗಳು ಉದ್ಯತ್ ಪ್ರಜಾಪೂರಿತವಾದ ಈ ನಗರಿಯು ಸುತ್ತಲೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಳಸಿದ್ದ ಕೋಟೆಯಿಂದ ಉರ್ವೀಮಂಡನವಾಯಿತೆಂದು ವರ್ಣನೆಯಿದೆ. ಹಲವಾರು ಶಾಸನಗಳನ್ನು ರಚಿಸಿರುವ ದೇವಪಾರ್ಯ, ತ್ರಿವಿಕ್ರಮ ಪಂಡಿತ, ಶಾಂತಿನಾಥ ಈ ಊರನ್ನು ಹಾಡಿಹೊಗಳಿದ್ದಾರೆ. ಹೊಯ್ಸಳರ ಕಾಲದಲ್ಲಿ ವಿದ್ಯೆಗೆ, ಐಶ್ವರ್ಯಕ್ಕೆ ಹೆಸರಾಗಿ ಈ ಊರು, 'ತೆಂಕಣ ಅಯ್ಯಾವೊಳೆ' ಎಂದಾಯಿತು. 'ಅಭಿನವ ದ್ವಾರಾವತಿಯಾಯಿತು.

ಆದರೆ ಹೊಯ್ಸಳರ ಕಾಲದಲ್ಲಿ ಅಭ್ಯುದಯದ ಪರಾಕಾಷ್ಠೆಯನ್ನು ತಲುಪಿದ್ದ ಈ ಪ್ರದೇಶ ಹೊಯ್ಸಳ ರಾಜ್ಯದ ಅವನತಿಯೊಂದಿಗೆ ತಾನೂ ಅವನತಿ ಹೊಂದಿತು. ಮುಂದೆ ಈ ಪ್ರದೇಶ ಚನ್ನಪಟ್ಟಣದ ಜಗದೇವರಾಯ, ತರೀಕೆರೆಯ ತಿಮ್ಮಪ್ಪನಾಯಕ, ಇಕ್ಕೇರಿಯ ಶಿವಪ್ಪನಾಯಕನ ಅಧೀನದಲ್ಲಿ ಒಂದು ಸಾಮಾನ್ಯ ಪ್ರದೇಶವಾಗಿದ್ದು ಅನಂತರ ಮೈಸೂರರಸರ ವಶವಾಯಿತು. ಆದರೆ ಮರಾಠಿಗರ ದಾಳಿಗೆ ಬೆದರಿ ಕಪ್ಪ ತೆತ್ತು ಸಾಕಾಗಿದ್ದ ಮೈಸೂರು ಅರಸರು ಕಷ್ಟದ ಹೊರೆ ತೀರುವವರೆಗೆ ಅಡವು ಇಟ್ಟ ಮೈಸೂರು ರಾಜ್ಯದ ಭಾಗಗಳಲ್ಲಿ ಈ ಊರು ಸೇರಿತು. ಆಗ ಇದು ಸುಲಿಗೆಗೊಳಗಾಗಿ ಹಾಳು ಹಳ್ಳಿಯಾಗಿ, ದರೋಡೆಕಾರರ ನೆಲೆಯಾಗಿತ್ತು.

ಹೀಗೆ ಅರಸೀಕೆರೆ ಅನೇಕ ರಾಜವಂಶಗಳ ಆಡಳಿತದಲ್ಲಿದ್ದು ಮುಂದೆ ಮೈಸೂರು ರಾಜ್ಯದ ಒಂದು ತಾಲ್ಲೂಕಾಗಿ ಬೆಳೆಯಿತು. ಮೊದಲು ಹಾರನಹಳ್ಳಿ ತಾಲ್ಲೂಕಾಗಿದ್ದ ಈ ಪ್ರದೇಶ 1882ರಲ್ಲಿ ಅರಸೀಕೆರೆ ತಾಲ್ಲೂಕಾಗಿ ರೂಪಿತವಾಯಿತು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅರಸೀಕೆರೆ, ಜಾವಗಲ್ ಮುಖ್ಯ ಕೇಂದ್ರಗಳಾಗಿದ್ದವು. ಇಲ್ಲಿಂದ ಅನೇಕ ಸ್ವಾತಂತ್ರ್ಯ ಯೋಧರು ನಾಡಿಗಾಗಿ ನಿರಂತರ ಸೇವೆ ಸಲ್ಲಿಸಿದ್ದಾರೆ.

ಇಂದಿನ ಅರಸೀಕೆರೆ ಒಂದು ನಗರ. ರೈಲ್ವೆ ಜಂಕ್ಷನ್

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲಿದ್ದು, ಈ ಊರು ರಾಜ್ಯದ ಹೆದ್ದಾರಿಯ ಮೇಲಿರುವುದರಿಂದ ಕರ್ನಾಟಕದ ಉತ್ತರ ಮತ್ತು ದಕ್ಷಿಣಕ್ಕೆ ಕೊಂಡಿಯಂತಿರುತ್ತದೆ. ಪ್ರಾಚೀನ ಕಾಲದಿಂದಲೂ ಇದು ವ್ಯಾಪಾರಕ್ಕೆ ಪ್ರಸಿದ್ಧವಾಗಿದೆ, ಅರಸೀಕೆರೆ ತಾಲ್ಲೂಕು ಆಧುನಿಕ ಆಡಳಿತಕ್ಕೆ ಒಳಪಟ್ಟಿದೆ.

ನಗರ ರಚನೆ–ಸಂಸ್ಕೃತಿ

ಅರಸೀಕೆರೆ ನಗರ ಈ ತಾಲ್ಲೂಕಿನ ಆಡಳಿತ ಕೇಂದ್ರವಾಗಿದೆ. ತಾಲ್ಲೂಕಿನ ಎರಡು ಪಟ್ಟಣಗಳಲ್ಲಿ ಅರಸೀಕೆರೆಯೂ ಒಂದು. ಕರ್ನಾಟಕದ ರಾಜಧಾನಿ ಬೆಂಗಳೂರಿನಿಂದ 165 ಕಿ.ಮೀ. ದೂರದಲ್ಲಿದೆ. ಜಿಲ್ಲಾ ಆಡಳಿತ ಕೇಂದ್ರ ಹಾಸನದಿಂದ 43 ಕಿ. ಮೀ. ದೂರದಲ್ಲಿದೆ. ಇದು ಒಂದು ಪ್ರಮುಖ ರೈಲ್ವೆ ಜಂಕ್ಷನ್ ಹೊಂದಿದ್ದು, ರಾಜ್ಯ ಹೆದ್ದಾರಿಯಲ್ಲಿದೆ. ಮೂರು ಕಡೆ ರೈಲ್ವೆ ಸಂಪರ್ಕ ಪಡೆದನಂತರ ಅರಸೀಕೆರೆ ಒಂದು ಪ್ರಮುಖ ವ್ಯಾಪಾರ ಕೇಂದ್ರವಾಗಿ ಬೆಳೆಯಿತು. ಹಾಸನ, ತಿಪಟೂರು (ತುಮಕೂರು ಜಿಲ್ಲೆ)ಗಳು ಇಲ್ಲಿಗೆ ಸಮೀಪವಿರುತ್ತವೆ. ಈ ನಗರ ಅತ್ಯಾಧುನಿಕ ಸೌಕರ್ಯಗಳನ್ನು ಹೊಂದಿದೆಯಾದರೂ ಕುಡಿಯುವ ನೀರಿನ ಪೂರೈಕೆ, ನಗರ ನೈರ್ಮಲ್ಯ, ಸಾರ್ವಜನಿಕ ಆರೋಗ್ಯದ ವಿಷಯದಲ್ಲಿ ಸಾಕಷ್ಟು ಸುಧಾರಣೆ ಅಗತ್ಯವಿರುತ್ತದೆ. ಇಲ್ಲಿನ ಜನಸಂಖ್ಯೆ 25,000ಕ್ಕೂ ಹೆಚ್ಚು.

1882ರಲ್ಲಿಯೇ ಅರಸೀಕೆರೆ ತಾಲ್ಲೂಕು ರೂಪುಗೊಂಡಿತು. ಇಲ್ಲಿನ ಪುರಸಭೆ ಬಹಳ ಹಳೆಯದು. ಇಲ್ಲಿ ಪುರಸಭಾ ಕಛೇರಿ, ತಾಲ್ಲೂಕು ಕಛೇರಿ, ವಿದ್ಯುಚ್ಛಕ್ತಿ ಹಾಗೂ ಲೋಕೋಪಯೋಗಿ ಇಲಾಖೆ ಕಛೇರಿ ಮತ್ತು ಇತರ ಸರ್ಕಾರಿ ಕಛೇರಿಗಳಿವೆ. ಪುರಸಭೆಯೇ ಇಲ್ಲಿ ಎರಡು ಸಿನಿಮಾ ಟಾಕೀಸುಗಳನ್ನು ನಡೆಸುತ್ತಿದೆ. ಒಂದು

Sri Vidyabharathi Book Centre, Shringeri

CC-O. In Public Domain. Digitized by eGangotri

ಕಾಲೇಜೂ ಇಲ್ಲಿದೆ. ಆಧುನಿಕ ಚಿತ್ರಮಂದಿರಗಳು ಇಲ್ಲಿವೆ. ಅರಸೀಕೆರೆ ಸಮೀಪದ ಕಸ್ತೂರಿಬಾ ಗ್ರಾಮ ಒಂದು ಮಾದರಿ ಗ್ರಾಮವಾಗಿ ಅಭಿವೃದ್ಧಿಯಾಗಿದೆ. ಈ ನಗರದಲ್ಲಿ ಪ್ರತಿ ಶುಕ್ರವಾರ ದೊಡ್ಡ ಸಂತೆ ಸೇರುತ್ತದೆ. ಅಂದು ತೆಂಗಿನಕಾಯಿ, ಕೊಬ್ಬರಿ, ಮೆಣಸಿನಕಾಯಿ, ಧಾನ್ಯ–ಇವೇ ಮೊದಲಾದವುಗಳ ವ್ಯಾಪಾರ ಜೋರು. ಸಮೀಪದ ತಿಪಟೂರು, ತೆಂಗು ಕೃಷಿಗೆ ಹೆಸರಾಗಿದೆ. ಇಲ್ಲಿ ನಡೆಯುವ ಗಣಪತಿ ಉತ್ಸವ ಸುತ್ತಮುತ್ತಲಿನಲ್ಲಿ ಹೆಸರಾದುದು. ಸುಮಾರು ಒಂದು ತಿಂಗಳ ಪರ್ಯಂತ ಗಣಪತಿ ಹಬ್ಬದ ಅಂಗವಾಗಿ ಸಂಗೀತ, ಸಾಹಿತ್ಯ ಮತ್ತು ಸಂಸ್ಕೃತಿಯ ಕಾರ್ಯಕ್ರಮಗಳು ನಡೆಯುತ್ತವೆ.

ಅರಸೀಕೆರೆಗೆ ಹಿಂದೆ 'ಉದ್ಭವಪುರ', 'ಸರ್ವಜ್ಞ ವಿಜಯಪುರ', 'ಬಲ್ಲಾಳಪುರ' ಎಂಬ ಹೆಸರುಗಳೂ ಇದ್ದವು. ಇಲ್ಲಿ 'ಸಹಸ್ರಕೂಟ', 'ಚೈತ್ಯಾಲಯ', 'ಜಗತೇಶ್ವರ', 'ಮೇಳೇಶ್ವರ', 'ನಖಿರ' ಜಿನಾಲಯ ಮೊದಲಾದ ಗುಡಿಗಳು ಇದ್ದವೆಂದೂ 'ಏಜೋಜ', 'ಸಿಂಗೋಜ' ಮೊದಲಾದ ರೂವಾರಿಗಳು ದೇವಾಲಯಗಳ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸಿದ್ದರೆಂದು ಶಾಸನಗಳು ತಿಳಿಸುತ್ತವೆ.

ಇಲ್ಲಿಯ 'ಕತ್ತಮೇಶ್ವರ' ದೇವಾಲಯ ಹೊಯ್ಸಳ ಶೈಲಿಯದು. ದೇವಾಲಯದ ಕೆತ್ತನೆ ದಿವ್ಯವಾಗಿದೆ. ಸಣ್ಣ ಗರ್ಭಗುಡಿ ಇದೆ. ಹೊರಗೋಡೆಯ ಮೇಲೆ ಒಂದು ಸಾಲು ಮೂರ್ತಿಶಿಲ್ಪಗಳಿವೆ. ಸುಕನಾಸಿ, ನವರಂಗ, ಮುಖಮಂಟಪಗಳು ಆಕರ್ಷಕವಾಗಿರುತ್ತವೆ. ಈ ದೇವಸ್ಥಾನದ ಎಡಭಾಗದಲ್ಲಿ ಜೋಡಿ ಗರ್ಭಗೃಹವುಳ್ಳ ಸಾಮಾನ್ಯ ಶಿವಾಲಯವಿದೆ. ಇದಕ್ಕೆ 'ಹಲವುಕಲ್ಲು ದೇವಸ್ಥಾನ' ಎಂದೂ ಹೆಸರಿದೆ. ಇದೇ ಊರಿನಲ್ಲಿ ಸಹಸ್ರ ಕೂಟ ಜಿನಾಲಯವೂ ಇದ್ದು, ಇದು ಹೊಯ್ಸಳ ಶೈಲಿಯ ಕಟ್ಟಡ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದನ್ನು ಇಮ್ಮಡಿ ಬಲ್ಲಾಳನ ದಂಡನಾಯಕ 'ವಸುಧೈಕ ಬಾಂಧವ ರೇಚರಸ'ನು ಕಟ್ಟಿಸಿರುತ್ತಾನೆ. ಇಲ್ಲಿ ಗಣಪತಿ ಮತ್ತು ಸಾಯಿನಾಥ ದೇವಸ್ಥಾನಗಳು, ಮೂರು ಕಳಸದ ಮಠಗಳೂ ಇವೆ. ಸಾಯಿ ನಾಥ ದೇವಸ್ಥಾನ ಬಹು ಸುಂದರವಾಗಿದೆ.

ಅರಸೀಕೆರೆ ತಾಲ್ಲೂಕಿನ ಕೆಲವು ಊರುಗಳು ಧಾರ್ಮಿಕ ಹಾಗೂ ಸಂಸ್ಕೃತಿಯ ಕೇಂದ್ರಗಳಾಗಿ ಪ್ರಸಿದ್ಧವಾಗಿವೆ.

ಪ್ರೇಕ್ಷಣೀಯ ಸ್ಥಳಗಳು

ಅರಕೆರೆ

ಇದು ಬಾಣಾವರ ಹೋಬಳಿಯ ಒಂದು ಹಳ್ಳಿ. ಇಲ್ಲಿರುವ ಚನ್ನಕೇಶವ ಮತ್ತು ರಾಮೇಶ್ವರ ದೇವಾಲಯಗಳು ಪ್ರಾಚೀನ ಕಾಲದವು. ರಾಮೇಶ್ವರ ದೇವಾಲಯ ಪಲ್ಲವರ ವಾಸ್ತುಶಿಲ್ಪವನ್ನು ಹೋಲುತ್ತಿದ್ದು, ಇಲ್ಲಿ ಗಂಗರಾಜ ಎರೆಯಪ್ಪನ ಕಾಲದ ಒಂದು ದೊಡ್ಡ ವೀರಗಲ್ಲು ಇದೆ. ಈ ದೇವಸ್ಥಾನದಲ್ಲಿ ವಿಷ್ಣು ಮತ್ತು ಸೂರ್ಯ ವಿಗ್ರಹಗಳು ಸುಂದರವಾಗಿವೆ.

ಬಾಣಾವರ

ಅರಸೀಕೆರೆ ತಾಲ್ಲೂಕಿನ ಒಂದು ಪಟ್ಟಣ. ಅರಸೀಕೆರೆಯಿಂದ 15 ಕಿ.ಮೀ. ದೂರದಲ್ಲಿದೆ. ಬೆಂಗಳೂರು–ಪೂನಾ ರೈಲುಮಾರ್ಗದ ನಿಲ್ದಾಣವೂ ಆಗಿದೆ. 1882 ರವರೆಗೂ ಇದು ತಾಲ್ಲೂಕು ಕೇಂದ್ರವಾಗಿತ್ತು. ಅನಂತರ ಅದು ಕಡೂರು ಜಿಲ್ಲೆಗೆ ವರ್ಗಾಯಿಸಲ್ಪಟ್ಟು ಅರಸೀಕೆರೆ ತಾಲ್ಲೂಕು ರಚನೆಯಾದ ಮೇಲೆ ಬಾಣಾವರ ಈ ತಾಲ್ಲೂಕಿನ ಹೋಬಳಿಯಾಯಿತು. ಇಲ್ಲಿಯ ಬಾಣೇಶ್ವರ ಬಹಳ ಪ್ರಸಿದ್ಧವಾಗಿದ್ದು, ಬಾಣ ರಾಜನಿಗೆ ಈ ಊರಿನ ಸಂಬಂಧವಿದ್ದಿರ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಹುದೆನ್ನಲಾಗಿದೆ. ಕರ್ನಾಟಕದ ಅರಸು ಮನೆತನಗಳು ಈ ಊರಿನ ಮೇಲೆ ಪ್ರಭುತ್ವ ಹೊಂದಿದ್ದವು. ಇಲ್ಲಿಯ ವೆಂಕಟ ರಮಣ, ಕೇಶವ ದೇವಾಲಯಗಳು ಪ್ರಸಿದ್ಧವಾಗಿವೆ. ಇಲ್ಲಿನ ಪುರಾತನ ಕೋಟೆ ಇನ್ನೂ ಉಳಿದಿದೆ. ಇಲ್ಲಿಯ ಅನೇಕ ಮನೆಗಳಲ್ಲಿ ಹಳೆಯ ಜೀರ್ಣವಾದ ದೇವಸ್ಥಾನಗಳ ಕಂಬಗಳನ್ನು ಈಗಲೂ ಕಾಣಬಹುದಾಗಿದೆ.

ಗರುಡನಗಿರಿ

ಇದೊಂದು ಗಿರಿದುರ್ಗ. ಸಮುದ್ರಮಟ್ಟದಿಂದ 1,507 ಮೀಟರ್ ಎತ್ತರವಿದೆ. ಬೆಟ್ಟದ ಮೇಲೆ ಕೋಟೆಯನ್ನು ಹೊಂದಿರುವ ಅತಿ ಪುರಾತನ ದುರ್ಗ. ಇದನ್ನು 'ನೊಳಂಬನಕಲ್' ಎಂದೂ ಕರೆಯುತ್ತಾರೆ. ಈ ಗಿರಿದುರ್ಗ ಬಾಣಾವರದ ಈಶಾನ್ಯಕ್ಕೆ 11 ಕಿ.ಮೀ. ದೂರದಲ್ಲಿದೆ. ಮೈಸೂರರಸರು ಬೆಟ್ಟದ ಮೇಲೆ ಕೋಟೆಯನ್ನು ಕಟ್ಟಿಸಿರುತ್ತಾರೆ.

ಜಾವಗಲ್

ಇದು ಹೋಬಳಿ ಕೇಂದ್ರ. ಇಲ್ಲಿನ ಲಕ್ಷ್ಮೀನರಸಿಂಹ ದೇವಾಲಯ ಹೊಯ್ಸಳ ಶೈಲಿಯದು. ಇಲ್ಲಿಯ ಗಣಪತಿ, ಮಹಿಷಾಸುರ ಮರ್ದಿನಿ ವಿಗ್ರಹಗಳು ಪ್ರಸಿದ್ಧವಾದವು. ಅಲ್ಲದೆ ಗಂಗಾಧರೇಶ್ವರ, ವೀರಭದ್ರ, ಬನಶಂಕರಿ ದೇವಾಲಯಗಳೂ, ಚಂದ್ರನಾಥ ಬಸದಿಯೂ ಇವೆ. ಲಕ್ಷ್ಮೀನರಸಿಂಹ ದೇವಾಲಯದ ಅನೇಕ ವಿಗ್ರಹಗಳನ್ನು ಮಲ್ಲಿತಮ್ಮನು ಕೆತ್ತಿದ್ದಾನೆ.

ಮಾಲೇಕಲ್ ತಿರುಪತಿ

ಅರಸೀಕೆರೆಗೆ ಮೂರು ಕಿ.ಮೀ. ದೂರದಲ್ಲಿ ಹಿರೇಕಲ್

Sri Vidyabharathi Book Centre, Sringeri

CC-O. In Public Domain. Digitized by eGangotri

ಬೆಟ್ಟಗಳ ಮೇಲೆ ಇದೆ. ಮಾಲೆಯಂತಿರುವ ಬೆಟ್ಟಗಳಿಂದ ಈ ಹೆಸರು ಬಂದಿದೆ. ಇಲ್ಲಿನ ವೆಂಕಟರಮಣ ಮತ್ತು ಗೋವಿಂದರಾಜ ಸ್ವಾಮಿ ದೇವಾಲಯಗಳು ಪ್ರಸಿದ್ಧವಾಗಿವೆ. ದೇವಸ್ಥಾನಕ್ಕೆ ಹೋಗಲು 1,700 ಮೆಟ್ಟಲುಗಳಿರುವ ಈ ಬೆಟ್ಟ ಪ್ರವಾಸಿಗರಿಗೆ ಒಂದು ಸುಂದರ ತಾಣವಾಗಿದೆ. ಇಲ್ಲಿನ ಕೊಳ ಆಕರ್ಷಣೀಯವಾಗಿದೆ. ಪ್ರತಿವರ್ಷ ಆಷಾಢ ಶುದ್ಧ ದ್ವಾದಶಿಯಂದು ಇಲ್ಲಿ ದೊಡ್ಡ ಜಾತ್ರೆಯಾಗುತ್ತದೆ.

ಮಾವತ್ತನ ಹಳ್ಳಿ

ಇದು ಬಾಣಾವರ ಹೋಬಳಿಯ ಒಂದು ಹಳ್ಳಿ. ಇಲ್ಲಿನ ಮಹಲಿಂಗೇಶ್ವರ ದೇವಾಲಯ ಹೊಯ್ಸಳ ವಾಸ್ತುಶಿಲ್ಪಕ್ಕೆ ಹೆಸರಾಗಿದೆ. ಇಲ್ಲಿರುವ ಅನೇಕ ಮೂರ್ತಿಗಳು ಕೆತ್ತನೆಯ ದೃಷ್ಟಿಯಿಂದ ನಯನಮನೋಹರವಾಗಿವೆ.

ನಾಗಪುರಿ ಕೋಟೆ

ಇದು ಅರಸೀಕೆರೆಗೆ 11 ಕಿ.ಮೀ. ಗಳ ದೂರದಲ್ಲಿದೆ. ಇದು ಮಾಲೇಕಲ್ ಬೆಟ್ಟಗಳ ಸಾಲಿನಲ್ಲಿದೆ. ಇಲ್ಲಿರುವ ಕೋಟೆಯನ್ನು ಹೈದರಾಲಿ ಕಟ್ಟಿಸಿರುತ್ತಾನೆ. ಕೋಟೆಯ ಮೇಲೆ ನಿಂತು ಸುತ್ತ ಮುತ್ತಣ ಪ್ರಕೃತಿ ಸೌಂದರ್ಯವನ್ನು ಸವಿಯಬಹುದಾಗಿದೆ. ಇಲ್ಲಿನ ನಿಸರ್ಗ ಸೌಂದರ್ಯ ರಮಣೀಯವಾಗಿದೆ.

ಹುಲ್ಲೇಕೆರೆ

ಅರಸೀಕೆರೆಯ ಆಗ್ನೇಯದಲ್ಲಿ ಹಾಸನ–ತಿಪಟೂರು ಮಾರ್ಗದಲ್ಲಿ ತಿಪಟೂರಿಗೆ 16 ಕಿ.ಮೀ. ದೂರದಲ್ಲಿದೆ. ಈ ತಾಲ್ಲೂಕಿನ ಗಂಡಸಿ ಹೋಬಳಿಯ ಒಂದು ಹಳ್ಳಿ. ಇಲ್ಲಿನ ಚನ್ನಕೇಶವ ದೇವಾಲಯವನ್ನು ಕ್ರಿ.ಶ. 1163ರಲ್ಲಿ ಮೊದಲನೆಯ ನರಸಿಂಹ ದೊರೆ

Sri Vidyabharathi Book Centre, Sringeri

CC-O. In Public Domain. Digitized by eGangotri



ಮಾಲೇಕಲ್ ತಿರುಪತಿ ಬೆಟ್ಟ, ಅರಸೀಕೆರೆ



ಗರುಡನಗಿರಿ ಬೆಟ್ಟ, ಸೊಳಂಬನಕಲ್

Sri Vidyabharathi Book Centre, Sringeri

CC-O. In Public Domain. Digitized by eGangotri



ಜೇನುಕಲ್ಲು ಸಿದ್ದಪ್ಪನ ಬೆಟ್ಟ



ಹಾರನಹಳ್ಳಿ ದೇವಾಲಯದ ಶಿಲ್ಪ ವೈಭವ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಟ್ಟಿಸಿದನೆನ್ನಲಾಗಿದೆ. ಹೊಯ್ಸಳ ಶೈಲಿಯ ಈ ದೇವಾಲಯದ ಕೆತ್ತನೆ ರಮಣೀಯವಾಗಿದೆ. ಮುಖಮಂಟಪ ಅಲಂಕೃತವಾಗಿದೆ. ಇಲ್ಲಿನ ವಿಷ್ಣುಮೂರ್ತಿ ಸುಂದರವಾಗಿದೆ.

ಈ ಗ್ರಾಮದಲ್ಲಿ ಸಪ್ತಮಾತೃಕೆಯರ ದೇವಾಲಯ, ಈಶ್ವರ ಹಾಗೂ ಆಂಜನೇಯ ದೇವಾಲಯಗಳಿವೆ. ದೊಡ್ಡ ಕೆರೆ ದಡದ ಈಶ್ವರ ದೇವಾಲಯದ ಹೆಚ್ಚು ಭಾಗ ಈಗಾಗಲೇ ಮುಚ್ಚಿ ಹೋಗಿದೆ. ಇಲ್ಲಿ ಈಶ್ವರ ಲಿಂಗ, ಗಣಪತಿ, ವೀರಭದ್ರರ ಮೂರ್ತಿಗಳಿವೆ.

ಹಾರನಹಳ್ಳಿ

ಅರಸೀಕೆರೆಗೆ ಎಂಟು ಕಿ.ಮೀ. ದೂರದಲ್ಲಿದೆ. ಕ್ರಿ.ಶ.11ನೇ ಶತಮಾನದಲ್ಲಿ ಶ್ರೀ ಸೋಮೇಶ್ವರ ರಾಯನು ಕಟ್ಟಿಸಿದ ಕೋಟೆ ಇಲ್ಲಿದೆ. ಇಲ್ಲಿ ಕೇಶವ ಹಾಗೂ ಸೋಮೇಶ್ವರ ದೇವಾಲಯಗಳು ಇವೆ. ಕೇಶವ ದೇವಾಲಯವನ್ನು ಕ್ರಿ.ಶ. 1234ರಲ್ಲಿ ನಿಜೇಶ್ವರ ಭಟ್ಟ, ಸಂಕಣ್ಣ ಹಾಗೂ ಗೋಪಣ್ಣ ಎಂಬ ಸೋದರರು ತಮ್ಮ ತಂದೆಯ ನೆನಪಿಗಾಗಿ ಕಟ್ಟಿಸಿದರು. ಲಕ್ಷ್ಮೀನರಸಿಂಹಸ್ವಾಮಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಇಲ್ಲಿ ವೇಣುಗೋಪಾಲನ ಸುಂದರ ಮೂರ್ತಿ ಇದೆ. ಸೋಮೇಶ್ವರ ದೇವಾಲಯವು ಕೇಶವ ದೇವಾಲಯದಂತೆಯೇ ಇದೆ. ಇಲ್ಲಿ 'ಸೋಮೇಶ್ವರ' ಹೊಯ್ಸಳ ರಾಜನು ತನ್ನ ಮಗಳ ನೆನಪಿಗಾಗಿ 'ನಾಗತಿಕೆರೆ'ಯನ್ನು ಕಟ್ಟಿಸಿರುತ್ತಾನೆ. ಈ ಊರಿನ 'ಕೋಡಿಮಠ' ಪ್ರಸಿದ್ಧವಾದುದು.

ಬೊಮ್ಮೇನಹಳ್ಳಿ

ಅರಸೀಕೆರೆಗೆ 6 ಕಿ.ಮೀ. ದೂರದಲ್ಲಿದೆ. ಇಲ್ಲಿಯ ಶಿಲಾ ಶಾಸನವೊಂದು 10 ಅಡಿ ಉದ್ದ, 3 ಅಡಿ ಅಗಲವಾಗಿದ್ದು ಪ್ರೇಕ್ಷಣೀಯವಾಗಿದೆ. ಇದು ಕರ್ನಾಟಕದ ಅತ್ಯಂತ ದೊಡ್ಡ ಶಿಲಾ

Sri Vidyabharathi Book Centre, Sringeri

 CC-O. In Public Domain. Digitized by eGangotri

ಶಾಸನಗಳಲ್ಲಿ ಒಂದಾಗಿದೆ. ಇದು ಇಮ್ಮಡಿ ಬಲ್ಲಾಳನ ಕಾಲದ್ದಾಗಿದ್ದು, ಇದರ ಸಾಹಿತ್ಯವನ್ನು ತ್ರಿವಿಕ್ರಮ ಕವಿ ರಚಿಸಿರುತ್ತಾನೆ.

ಅರಸೀಕೆರೆಗೆ ನಾಲ್ಕು ಕಿ.ಮೀ. ದೂರದಲ್ಲಿರುವ ಕಂಚಿಕೋವಿ ಮರತಿ ಬೆಟ್ಟದ ಮೇಲೆ ದೇವಾಲಯಗಳ ಅವಶೇಷಗಳಿರುತ್ತವೆ. ಇಲ್ಲಿ ಆಗಾಗ್ಗೆ ಹಿಂದಿನ ಕಾಲದ ನಾಣ್ಯಗಳು ದೊರೆಯುತ್ತಿರುವುದರಿಂದ, ಈ ಬೆಟ್ಟ ಪ್ರದೇಶ ಹಿಂದೆ ಒಂದು ದೊಡ್ಡ ಊರಾಗಿದ್ದಿರಬಹುದು ಎನ್ನಲಾಗಿದೆ.

ವ್ಯವಸಾಯ

ಅರಸೀಕೆರೆ ತಾಲ್ಲೂಕು ವ್ಯವಸಾಯ ಪ್ರಧಾನವಾದ ತಾಲ್ಲೂಕು. ಮಳೆ ಆಧಾರಿತ ಖುಷ್ಕಿ ವ್ಯವಸಾಯವಿರುವ ಇಲ್ಲಿ ನೀರಾವರಿ ಬಹು ಕಡಿಮೆ. ಖುಷ್ಕಿ, ತರಿ, ಬಾಗಾಯಿತು ವ್ಯವಸಾಯವಿದ್ದು ಸುಮಾರು ಐವತ್ತೈದು ಸಾವಿರ ಮಂದಿ ಕೃಷಿಕರಿದ್ದಾರೆ. ಮುಂಗಾರು ಮತ್ತು ಹಿಂಗಾರು ಮಳೆಯ ಆಶ್ರಯದಿಂದ ರಾಗಿ, ಬತ್ತ, ಜೋಳ, ಬೇಳೆಕಾಳು, ಮೆಣಸಿನಕಾಯಿ, ಕಡಲೆಕಾಯಿ, ಹತ್ತಿ, ಕಬ್ಬು ಮೊದಲಾದವುಗಳನ್ನು ಬೆಳೆಯುತ್ತಾರೆ.

ಈ ತಾಲ್ಲೂಕಿನಲ್ಲಿ ಫಲವತ್ತಾದ, ಗಡುಸಾದ ಕೆಂಪು ಹಾಗೂ ಬೂದು ಮಣ್ಣಿನ ಭೂಮಿ ಇರುತ್ತದೆ. ಭೂಮಿ ದಕ್ಷಿಣದಿಂದ ಉತ್ತರದ ಕಡೆ ಇಳಿಜಾರಾಗಿದೆ.

ಅರಸೀಕೆರೆ ತಾಲ್ಲೂಕಿನ ಒಟ್ಟು ಭೂ ಪ್ರದೇಶ 1,23,452 ಹೆಕ್ಟೇರುಗಳು. ಅದರಲ್ಲಿ ಅರಣ್ಯ ಪ್ರದೇಶ 15,049 ಹೆಕ್ಟೇರುಗಳು. ಬಿತ್ತನೆಯಾಗುವ ನಿವ್ವಳ ಪ್ರದೇಶ ಸುಮಾರು 56,000 ಹೆಕ್ಟೇರುಗಳು. ಕೆರೆ, ನೀರಾವರಿ ಬಾವಿಗಳ ಆಶ್ರಯದಲ್ಲಿ ಬೆಳೆ

Sri Vidyabharathi Book Centre, Sringeri

CC-O. In Public Domain. Digitized by eGangotri

ತೆಗೆಯಲಾಗುತ್ತಿದೆ. ಬಾಗಾಯಿತು ಬೆಳೆಯಾಗಿ ತೆಂಗು ಬೆಳೆಯಲಾಗುತ್ತಿದೆ. ತೆಂಗಿನ ಕೃಷಿಗೆ ಅರಸೀಕೆರೆ ಪ್ರಸಿದ್ಧಿಯಾಗಿದೆ. ಅಲ್ಲದೆ ತೆಂಗು ಪ್ರಸಿದ್ಧವಾದ ವ್ಯಾಪಾರಿ ಬೆಳೆಯೂ ಆಗಿದೆ. ಇಲ್ಲಿರುವ 'ತೆಂಗು ಸಂಶೋಧನಾ ಕೇಂದ್ರ' ಕೃಷಿ ವಿಶ್ವವಿದ್ಯಾಲಯಕ್ಕೆ ಸೇರಿದ್ದು ತೆಂಗಿನ ಅಭಿವೃದ್ಧಿಗಾಗಿ ವಿಶೇಷವಾಗಿ ಶ್ರಮಿಸುತ್ತಿದೆ. ಕೆಲ ಮಟ್ಟಿಗೆ ಇಲ್ಲಿ ಅಡಿಕೆ ವ್ಯವಸಾಯವೂ ಉಂಟು, ಆದರೆ ಬಹು ಕಡಿಮೆ.

1984–85ರಲ್ಲಿ ಈ ತಾಲ್ಲೂಕಿನಲ್ಲಿ ವ್ಯವಸಾಯದ ವಿವರಗಳು ಈ ಕೆಳಗಿನಂತಿವೆ.

ಬೆಳೆ	ವಿಸ್ತೀರ್ಣ(ಹೆಕ್ಟೇರುಗಳಲ್ಲಿ)
ಬತ್ತ (ಅಧಿಕ ಇಳುವರಿ ತಳಿಗಳೂ ಸೇರಿ)	510
ಜೋಳ(ಅಧಿಕ ಇಳುವರಿ ತಳಿಗಳೂ ಸೇರಿ)	7,864
ರಾಗಿ	23,745
ಹತ್ತಿ	2,522
ಹರಳು	1,050
ಎಳ್ಳು	5,182
ಮೆಣಸಿನಕಾಯಿ	1,075
ದ್ವಿದಳ ಧಾನ್ಯಗಳು	4,731
ತೆಂಗು	18,225
ಹಿಪ್ಪನೇರಳೆ	76
ಕಬ್ಬು	—
ಹಣ್ಣುಗಳು	530
ತರಕಾರಿಗಳು	426

Sri Vidyabharathi Book Centre, Sringeri

 CC-O. In Public Domain. Digitized by eGangotri

ಪ್ರಸಿದ್ಧವಾದ ಯಾವ ಜಲಾಶಯಗಳ ನೆರವೂ ಇಲ್ಲಿ ಇರುವುದಿಲ್ಲ. ಜಾವಗಲ್ ಹೋಬಳಿಯ ತಿಮ್ಮನಹಳ್ಳಿಯ ಹತ್ತಿರ ವೇದಾವತಿ ನದಿಗೆ ಅಡ್ಡಲಾಗಿ ಹಾಕುತ್ತಿರುವ ಕಟ್ಟೆಯೇ ಈ ತಾಲ್ಲೂಕಿಗೆ ವರದಾನವಾಗಲಿದೆ. ಹಳೆಯ ಕಾಲದ ಒಡ್ಡನ್ನು ತೆಗೆದು ಈಗ ಹೊಸದಾಗಿ ನಿರ್ಮಿಸಲಾಗುತ್ತಿದೆ.

ಈ ತಾಲ್ಲೂಕಿನಲ್ಲಿ 1,26,314 ವ್ಯವಸಾಯ ಉಪಕರಣ ಗಳಿರುತ್ತವೆ. ಇವುಗಳಲ್ಲಿ ಟ್ರ್ಯಾಕ್ಟರ್, ನೀರಾವರಿ ಪಂಪ್‌ಸೆಟ್ಟು ಗಳೂ ಸೇರಿವೆ.

'ಹೆಬ್ಬನಗಟ್ಟ'ದ ಸಹಕಾರಿ ಸಾಮೂಹಿಕ ವ್ಯವಸಾಯ ಸಂಘವು ಉತ್ತಮ ಸೇವೆ ಸಲ್ಲಿಸುತ್ತಿದೆ. ಜನರಲ್ಲಿ ಆಧುನಿಕ ಬೇಸಾಯ ಪದ್ಧತಿಯ ಅರಿವು ಮೂಡಿದ್ದು, ಸಂಸ್ಕರಿಸಿದ ಬೀಜ, ಕೃತಕ ಗೊಬ್ಬರ, ನೀರಾವರಿ ಮೊದಲಾದ ಯೋಜನೆಗಳಿಂದ ವ್ಯವ ಸಾಯದಲ್ಲಿ ಹಲವಾರು ಸುಧಾರಣೆಗಳು ಕಂಡುಬರುತ್ತಿವೆ. ಕೃಷಿಕ ರಲ್ಲೂ ಆಧುನಿಕ ವೈಜ್ಞಾನಿಕ ಮನೋಭಾವನೆ ಮೂಡಿರುವುದ ರಿಂದ ತಾಲ್ಲೂಕಿನ ಹಲವೆಡೆಗಳಲ್ಲಿ ಆಧುನಿಕ ಕೃಷಿಕರು ವಿಕ್ರಮ ಸ್ಥಾಪಿಸುವ ಬೆಳೆ ಬೆಳೆಯುತ್ತಿದ್ದಾರೆ. ತೆಂಗಿನ ಬೆಳೆ ಬೆಳೆಯುವುದರ ಲ್ಲಂತೂ ಕೃಷಿಕರಲ್ಲಿ ಸ್ಪರ್ಧೆಯೇ ಇರುತ್ತದೆ. ತರಕಾರಿಗಳು, ದ್ರಾಕ್ಷಿ ಮತ್ತಿತರ ಹಣ್ಣುಗಳು, ಬಗೆಬಗೆಯ ಹೂವುಗಳು ಈ ತಾಲ್ಲೂಕಿಗೆ ಇತರ ಕಡೆಗಳಿಂದ ಬರಬೇಕಾದ ಪರಿಸ್ಥಿತಿ ಇನ್ನೂ ತಪ್ಪಿರುವುದಿಲ್ಲ. ಇಲ್ಲಿ ಮಳೆಯೇ ಮುಖ್ಯ ಆಧಾರ. ಮಳೆ ಇಲ್ಲದಿದ್ದರೆ ಬರಗಾಲ ಎದುರಿಸಬೇಕಾದ ಪರಿಸ್ಥಿತಿ. ಆದ್ದರಿಂದ ಅನಾವೃಷ್ಟಿಯ ದವಡೆಗೆ ಆಗಾಗ ಈ ತಾಲ್ಲೂಕು ಸಿಲುಕುವುದೂ ಉಂಟು.

ಪಶುಸಂಗೋಪನೆ

ಈ ತಾಲ್ಲೂಕಿನಲ್ಲಿ ವ್ಯವಸಾಯದೊಡನೆ 'ಪಶುಸಂಗೋ

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರಸಭಾ ಕಾರ್ಯಾಲಯ, ಅರಸೀಕೆರೆ



ಕೃಷಿ ಕ್ಷೇತ್ರ, ಬೆಳಗುಂಬ

Sri Vidyabharathi Book Centre, Sringeri

 CC-O. In Public Domain. Digitized by eGangotri

ಪನೆ'ಯೂ ಇರುತ್ತದೆ. ಇಲ್ಲಿಯ ಅಮೃತಮಹಲ್ ಮತ್ತು ಹಳ್ಳಿ ಕಾರ್ ತಳಿಗಳು ಉತ್ತರ ಕರ್ನಾಟಕದ ಜನರ ಮನವನ್ನು ಸೆಳೆದಿವೆ. ದನಗಳ ಜಾತ್ರೆಗೆ ಪ್ರಸಿದ್ಧವಾದ ಹಾಸನದ ಜಾತ್ರೆಯಲ್ಲಿ ಸಾವಿರಾರು ಹಸು, ಎತ್ತುಗಳ ಜೋಡಿಗಳು ಖರೀದಿಸಲ್ಪಡುತ್ತವೆ. ರಾಜ್ಯ ದಲ್ಲೇ ಈ ಜಾನುವಾರು ಜಾತ್ರೆ ಹೆಸರು ಪಡೆದಿದೆ. ಈ ತಾಲ್ಲೂಕಿನ ಗಂಡಸಿಯಲ್ಲಿ ನಡೆಯುವ ಸಂತೆಯೂ ಪಶುಗಳ ವ್ಯಾಪಾರಕ್ಕೆ ಕೇಂದ್ರವಾಗಿದೆ. ಇಲ್ಲಿನ ಜನರು ಬಹಳ ಶ್ರಮವಹಿಸಿ ದನಕರು ಗಳನ್ನು ಸಾಕುತ್ತಾರೆ. ಈ ತಾಲ್ಲೂಕಿನಲ್ಲಿ 1,35,169 ದನಗಳು, 18,105 ಎಮ್ಮೆಕೋಣಗಳು, 55,119 ಕುರಿಗಳು, 29,673 ಮೇಕೆಗಳು, 44,975 ಕೋಳಿಗಳು ಇರುತ್ತವೆ. ಸುಮಾರು ಹದಿ ಮೂರು ಪಶುವೈದ್ಯಾಲಯಗಳು ತಾಲ್ಲೂಕಿನಲ್ಲಿ ಸೇವೆ ಸಲ್ಲಿಸು ತ್ತಿವೆ. ಹಾಸನದಲ್ಲಿ ಕರ್ನಾಟಕ ರಾಜ್ಯದ ಹೈನು ಅಭಿವೃದ್ಧಿ ನಿಗಮದ ಕಛೇರಿ ಸ್ಥಾಪನೆಯಾದ ಮೇಲೆ ಇಡೀ ತಾಲ್ಲೂಕಿನಲ್ಲಿ ಪಶುಸಂಗೋಪನೆಗೆ ಹೆಚ್ಚಿನ ಮಹತ್ವ ದೊರೆತಂತಾಗಿದೆ. ಕುರಿ ಸಾಕಣೆ ಈ ತಾಲ್ಲೂಕಿನಲ್ಲಿ ಚುರುಕಾಗಿದೆ. ಆದರೆ ಮೀನುಗಾರಿಕೆ ಇಲ್ಲಿ ತೀರ ಅಲ್ಪ.

ಕೈಗಾರಿಕೆಗಳು

ಅರಸೀಕೆರೆ ತಾಲ್ಲೂಕು ಕೈಗಾರಿಕೆಗಳ ವಿಷಯದಲ್ಲಿ ಹಿಂದುಳಿದ ಪ್ರದೇಶ ಎನಿಸಿದೆ. ಅನೇಕ ಬಗೆಯ ಕಚ್ಚಾಮಾಲುಗಳು ದೊರೆಯು ತ್ತಿದ್ದು, ಸಾಕಷ್ಟು ಸೌಲಭ್ಯವಿದ್ದರೂ ಕಾರ್ಖಾನೆಗಳು ಹೆಚ್ಚಿಗೆ ಇರುವುದಿಲ್ಲ. ಇಲ್ಲಿ ಯಾವುದೇ ಬೃಹತ್ ಕೈಗಾರಿಕೆಗಳಿಲ್ಲ. ಅಲ್ಲಲ್ಲಿ ಸಣ್ಣಪುಟ್ಟ ಕೈಗಾರಿಕೆಗಳಿವೆ. ಮರ ಕೊಯ್ಯುವ ಮತ್ತು ತೆಂಗಿನ ನಾರಿನ ಕೈಗಾರಿಕೆಗಳು ಗಮನಾರ್ಹವಾಗಿ ಇವೆ. 1966ರಲ್ಲಿ ತೆಂಗಿನ

Sri Vidyabharathi Book Centre, Sringeri

 CC-O. In Public Domain. Digitized by eGangotri

ನಾರಿನ ಬೃಹತ್ ಕೈಗಾರಿಕೆಯೊಂದು ಇಲ್ಲಿ ಸ್ಥಾಪನೆಯಾಗಿದೆ. ಈ ತಾಲ್ಲೂಕಿನಲ್ಲಿ ಅನೇಕ ಖಾಸಗಿ ನಾರಿನ ಕಾರ್ಖಾನೆಗಳಿವೆ. ಬಾಗೇಶಪುರದ ಚೈನಾಮಣ್ಣು ಗಣಿಗಳು ತಾಲ್ಲೂಕಿನ ದೊಡ್ಡ ಖನಿಜೋದ್ಯಮ. ಕೋರಂಡಂ ತೆಗೆಯುವ ಕಾರ್ಯ ಇಲ್ಲಿ ನಡೆದಿದೆ.

ಹತ್ತಿ ಹೆಚ್ಚಾಗಿ ಬೆಳೆಯುವ ಅರಸೀಕೆರೆ ತಾಲ್ಲೂಕಿನಲ್ಲಿ ಯಾವುದೇ ಕಾರ್ಖಾನೆ ಸ್ಥಾಪನೆಯಾಗಿಲ್ಲ. ಅಲ್ಲಲ್ಲಿ ಸಣ್ಣ ಪ್ರಮಾಣದ ಹತ್ತಿ ಹಿಂಜುವ ಕಾರ್ಖಾನೆಗಳಿವೆ. ಆಧುನಿಕವಾದ ಬೃಹತ್ ಬಟ್ಟೆ ಗಿರಣಿ ಇಲ್ಲಿ ಅಪೇಕ್ಷಣೀಯ.

ಈ ತಾಲ್ಲೂಕಿನಲ್ಲಿ ಎಣ್ಣೆಕಾಳುಗಳು ಅಧಿಕವಾಗಿ ಬೆಳೆಯುವುದರಿಂದ, ಕೆಲವು ಎಣ್ಣೆಯ ಗಿರಣಿಗಳು ಇಲ್ಲಿವೆ. ಇದರೊಡನೆ ಅನೇಕ ಸಾಬೂನು ತಯಾರಿಕಾ ಘಟಕಗಳೂ ಇವೆ.

ವಿಶೇಷವಾದ ಜೇಡಿಮಣ್ಣು ಇಲ್ಲಿ ದೊರೆಯುವುದರಿಂದ ಕೆಲವು ಹೆಂಚಿನ ಕಾರ್ಖಾನೆಗಳಿವೆ. ತುಪ್ಪಟದಿಂದ ಕಂಬಳಿ ತಯಾರಿಸುವ ಕೈಮಗ್ಗ ಮತ್ತು ಪವರ್‌ಲೂಮ್‌ಗಳೂ ಇವೆ. ಕೆಂಕೆರೆ ಮತ್ತು ಚಗಚಗೆರೆಗಳಲ್ಲಿ 'ನೇಕಾರರ ಸಹಕಾರ ಸಂಘ'ಗಳು ನೇಕಾರರ ಅಭಿವೃದ್ಧಿಗಾಗಿ ಶ್ರಮಿಸುತ್ತಿವೆ.

ಜಿಲ್ಲಾ ಕೈಗಾರಿಕಾ ಸಹಕಾರಿ ಬ್ಯಾಂಕು ಕೈಗಾರಿಕೆ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಬೆಂಗಳೂರು–ಹೊನ್ನಾವರ ರಸ್ತೆಯಲ್ಲಿರುವ 'ಕರ್ನಾಟಕ ಕಾಯರ್ ಪ್ರಾಡಕ್ಟ್ಸ್' ಹಾಗೂ 'ಮೀನಾ ಎಂಟರ್‌ಪ್ರೈಸಸ್' ಅರಸೀಕೆರೆ ತಾಲ್ಲೂಕಿನ ಮುಖ್ಯ ನಾರಿನ ಉದ್ದಿಮೆಗಳು. ಬಾಣಾವರದಲ್ಲಿಯೂ ನಾರಿನ ಕೈಗಾರಿಕೆ ಇದೆ. ಕಲ್ಯಾಡಿಯಲ್ಲಿ ತಾಮ್ರದ ಅದಿರಿನ ನಿಕ್ಷೇಪಗಳಿದ್ದು ತಾಮ್ರದ ಗಣಿ ಸ್ಥಾಪನೆಗೆ ಯತ್ನಿಸಬಹುದು. ಇದು ಸಾವಿರಾರು ಜನರಿಗೆ ಉದ್ಯೋಗವನ್ನು ನೀಡಬಲ್ಲುದು.

Sri Vidyabharathi Book Centre, Sringeri

CC-O. In Public Domain. Digitized by eGangotri



ಊದುಬತ್ತಿ ಉದ್ಯಮ



ನಾರಿನ ಉದ್ಯಮ

Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri

ಈ ತಾಲ್ಲೂಕಿನ ಕೈಗಾರಿಕೆಗಳ ವಿವರ ಈ ರೀತಿ ಇದೆ :

ನೋಂದಣಿಯಾದ ಸಣ್ಣ ಕೈಗಾರಿಕೆಗಳು	126
ನೋಂದಣಿಯಾದ ಗೃಹ ಕೈಗಾರಿಕೆಗಳು	583
ನೋಂದಣಿಯಾದ ಕೈಮಗ್ಗದ ಕೈಗಾರಿಕೆಗಳು	280
ಗಣಿಗಳು	28
ನೋಂದಣಿಯಾದ ಕಾರ್ಖಾನೆಗಳು	14

ವಿದ್ಯಾಭ್ಯಾಸ ಸೌಕರ್ಯ

ಈ ತಾಲ್ಲೂಕಿನಲ್ಲಿ ಸಾಕ್ಷರತೆ ಒಟ್ಟು ಶೇ. 38.53 ಇದ್ದು ಪುರುಷರಲ್ಲಿ ಈ ಪ್ರಮಾಣ ಶೇ. 49.53 ಮತ್ತು ಸ್ತ್ರೀಯರಲ್ಲಿ ಶೇ. 27.18 ಇದೆ. ಕಳೆದ ಮೂರು ದಶಕಗಳಿಂದ ಇಲ್ಲಿ ಶೈಕ್ಷಣಿಕ ಪ್ರಗತಿ ಕಂಡುಬರುತ್ತಿದೆ. ಈ ತಾಲ್ಲೂಕಿನಲ್ಲಿ 16 ಶಿಶುವಿಹಾರಗಳು, 254 ಕಿರಿಯ ಪ್ರಾಥಮಿಕ ಪಾಠಶಾಲೆಗಳು, 116 ಹಿರಿಯ ಪ್ರಾಥಮಿಕ ಶಾಲೆಗಳು, 46 ಪ್ರೌಢಶಾಲೆಗಳು ಮತ್ತು ವಿವಿಧ ರೀತಿಯ 9 ಕಾಲೇಜುಗಳು ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿವೆ. ಜಾವಗಲ್, ಬೆಳಗುಂಬ, ದೊಡ್ಡಮೇಟಿಕುರ್ಕೆ, ಗಂಡಸಿ, ಹಾರನಹಳ್ಳಿ, ಜಯಚಾಮರಾಜಪುರ, ಕೋಳಗುಂದ, ಕಲ್ಲುಂಡಿ, ಬಾಗೇವಾಳು, ಗಂಡಸಿ ಸಂತೆ, ಅಣೆಕಟ್ಟೆ, ಯಡವನಹಳ್ಳಿ, ಉಂಡಿಗನಹಾಳು, ಹುಲ್ಲೇಕೆರೆ, ಬಾಣಾವರಗಳಲ್ಲಿ ಪ್ರೌಢಶಾಲೆ ಮತ್ತು ಕಿರಿಯ ಕಾಲೇಜುಗಳಿವೆ. ಅರಸೀಕೆರೆಯಲ್ಲಿ ಬಾಲಕಿಯರ ಪ್ರೌಢಶಾಲೆ ಇದೆ. ಇಲ್ಲಿ ಹೊಯ್ಸಳೇಶ್ವರ ಕಾಲೇಜ್ ಮತ್ತು ವಿವೇಕಾನಂದ ಶಿಕ್ಷಣ ಸಂಸ್ಥೆಗಳಿವೆ.

ಹೊಯ್ಸಳೇಶ್ವರ ಕಾಲೇಜ್ ಕನ್ನಡನಾಡಿನ ಖ್ಯಾತ ಅರಸು ಮನೆತನ 'ಹೊಯ್ಸಳ'ರ ಸ್ಮಾರಕವಾಗಿ 1970ರಲ್ಲಿ ಸಿರಿಗೆರೆಯ

Sri Vidyabharathi Book Centre, Sringeri

 CC-O. In Public Domain. Digitized by eGangotri

ತರಳಬಾಳು ವಿದ್ಯಾಸಂಸ್ಥೆಯ ಅಂಗವಾಗಿ ಪ್ರಾರಂಭವಾಯಿತು. ಇಲ್ಲಿ ಪದವಿಪೂರ್ವ ಮತ್ತು ಕಲೆ ಮತ್ತು ವಿಜ್ಞಾನದ ಪದವಿ ತರಗತಿಗಳು ನಡೆಯುತ್ತವೆ. ಇಲ್ಲಿ ಸುಮಾರು ಎರಡು ಸಾವಿರ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಈ ಕಾಲೇಜು ತನ್ನದೇ ಆದ ಭವನವನ್ನು ಹೊಂದುವ ಹಂತದಲ್ಲಿದ್ದು, ಇಲ್ಲಿನ ಪರಿಸರ ಪ್ರಶಾಂತವಾಗಿದೆ.

ವಿವೇಕಾನಂದ ಶಿಕ್ಷಣ ಕಾಲೇಜು, ಈ ಭಾಗಕ್ಕೆ ಕೊರತೆಯಾಗಿದ್ದ ಶಿಕ್ಷಣ ಪ್ರಸಾರವನ್ನು ತುಂಬಿ ಕೊಡುತ್ತಿದೆ. ಅಲ್ಲದೆ ಬಾಣಾವರದ ಶ್ರೀ ಸಚ್ಚಿದಾನಂದ ಸದ್ಗುರು ಸಂಸ್ಕೃತ ಪಾಠಶಾಲೆ, ಹರಳೇಕಟ್ಟೆ, ಮೂರು ಕಳಸದ ಮಠ ಮತ್ತು ಉಜ್ಜನಿ ಮಠಗಳು ಸಂಸ್ಕೃತ ಶಿಕ್ಷಣ ಕಾರ್ಯದಲ್ಲಿ ತೊಡಗಿವೆ.

ಈ ತಾಲ್ಲೂಕಿನಲ್ಲಿ ವಯಸ್ಕರ ಶಿಕ್ಷಣ ಸಮಿತಿ ತಾಲ್ಲೂಕಿನ ಅಕ್ಷರಸ್ಥರ ಸಂಖ್ಯೆಯನ್ನು ಹೆಚ್ಚಿಸಲು ದುಡಿಯುತ್ತಿದೆ. ಹಿಂದುಳಿದ ಈ ಪ್ರದೇಶದಲ್ಲಿ ವೃತ್ತಿ ಶಿಕ್ಷಣಕ್ಕೆ ಅನುಕೂಲವಾಗುವಂತೆ ವೃತ್ತಿ ಶಿಕ್ಷಣ ಶಾಲೆ ಬೇಕಾಗಿರುತ್ತದೆ. ಅಲ್ಲದೆ ಇದು ವ್ಯವಸಾಯ ಪ್ರಧಾನವಾದ ಭಾಗವಾದುದರಿಂದ ವ್ಯವಸಾಯ, ತೋಟಗಾರಿಕೆ ಮತ್ತು ಪಶುಪಾಲನೆಯಲ್ಲಿ ತರಬೇತಿ ನೀಡುವ ಶಾಲೆಗಳು ಅತ್ಯವಶ್ಯಕ. ತೆಂಗಿನ ಬೆಳೆಗೆ ಪ್ರಾಧಾನ್ಯತೆ ಇರುವುದರಿಂದ ತೆಂಗಿನ ನಾರು ಉದ್ಯಮ ಮೊದಲಾದ ಕ್ಷೇತ್ರಗಳಲ್ಲಿ ಪ್ರಾವೀಣ್ಯತೆ ಪಡೆಯಲು ಅನುಕೂಲ ಮಾಡಿಕೊಡಬೇಕು. ಅದಕ್ಕಾಗಿ ತರಬೇತಿ ಶಾಲೆಯೊಂದರ ಸ್ಥಾಪನೆ ಅಗತ್ಯವಾಗಿದೆ.

ಕಲೆ–ಸಾಹಿತ್ಯ

ಅರಸೀಕೆರೆ ತಾಲ್ಲೂಕಿನಲ್ಲಿ 'ಜನಪದ ಕಲೆ' ಬಹು ಪ್ರಾಚೀನ ಕಾಲದಿಂದಲೂ ಉಳಿದುಕೊಂಡು ಬಂದಿದೆ. ಹಲವಾರು ಜಾನಪದ

Sri Vidyabharathi Book Centre, Sringeri

CC-O. In Public Domain. Digitized by eGangotri



ಮೂರು ಕಳಸದ ಮಠ, ಆರಸೀಕೆರೆ



ವಿವೇಕಾನಂದ ಶಿಕ್ಷಣ ಕಾಲೇಜ್, ಆರಸೀಕೆರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಲೆಗಳೂ ಇಂದಿಗೂ ಜೀವಂತವಾಗಿವೆ. ಹಾರನಹಳ್ಳಿಯ ಕರಡಿ ಮೇಳ, ಗಾರುಡಿಗ, ಚಿಟ್ಟಮೇಳ, ಕೀಲುಕುದುರೆ, ಕೋಲಾಟ, ಕೋಲೆಬಸವ, ಚೌಡಿಕೆ, ತೊಗಲುಬೊಂಬೆಯಾಟ, ತೊಂಡಲ ದೇವರ ಕುಣಿತ, ನಂದೀಧ್ವಜ, ಲಿಂಗದಬೀರ, ವೀರಗಾಸೆ, ವೀರ ಭದ್ರನ ಕುಣಿತ, ಬಯಲಾಟ (ಮೇಳ), ಲಂಬಾಣಿ ಕುಣಿತ, ರಂಗದ ಕುಣಿತ, ಸೋಮನ ಕುಣಿತ, ಹಲಗೆ ಕುಣಿತ, ಹುಲಿವೇಷ ಮೊದಲಾದ ಕಲೆಗಳು ಈ ಭಾಗದ ಜನರಲ್ಲಿ ರಕ್ತಗತವಾಗಿವೆ.

ಅರಸೀಕೆರೆ ತಾಲ್ಲೂಕು ಹಲವಾರು ಪ್ರತಿಭಾವಂತರಿಗೆ ಜನ್ಮ ನೀಡಿದೆ. ಈ ತಾಲ್ಲೂಕಿನಲ್ಲಿ ಹಲವಾರು ಶಾಸನ ಕವಿಗಳು ಇದ್ದರು. ಆಧುನಿಕ ಬರಹಗಾರರಲ್ಲಿ ಅರಸೀಕೆರೆಯ ಶ್ರೀ ಎಚ್. ಬಿ. ರಮೇಶ್ ಅವರು ಹಾಸನ ಜಿಲ್ಲೆಯಲ್ಲಿ ಖ್ಯಾತ ಸಾಹಿತಿಗಳು. ಈ ತಾಲ್ಲೂಕಿನ ಕುರುವಂಕದ ಶ್ರೀ ಕೆ. ಎಸ್. ರಾಮಕೃಷ್ಣ ಮೂರ್ತಿ, ಅರಸೀಕೆರೆಯ ಶ್ರೀ ಕೊ. ಸು. ಸೀತಾರಾಂ ಉತ್ತಮ ಬರಹಗಾರರು.

ಕನ್ನಡ ಬೆರಳಚ್ಚು ಯಂತ್ರದ ಜನಕರಾದ ಶ್ರೀ ಕೆ. ಅನಂತ ಸುಬ್ಬರಾಯರು ಅರಸೀಕೆರೆಯಲ್ಲಿ ಜನ್ಮತಾಳಿದ ಮಹನೀಯರು. ಬಾಣಾವರದ ಶ್ರೀ ಬಿ. ಎಸ್. ರಾಜಯ್ಯಂಗಾರ್ ಅವರು ಪ್ರಸಿದ್ಧ ಕಲಾವಿದರು. ಇವರು ಅರಸೀಕೆರೆಯಲ್ಲಿ ಭರತ ಕಲಾನಿಕೇತನ ನೃತ್ಯ ಶಾಲೆಯನ್ನು ಸ್ಥಾಪಿಸಿದ್ದಾರೆ.

ಜಾವಗಲ್‌ನಲ್ಲಿರುವ 'ಕಲಾ ಸೇವಾ ಮಂಡಳಿ' 1960ರಲ್ಲಿ ಪ್ರಾರಂಭವಾಗಿ ಕನ್ನಡನಾಡಿಗೆ ಅರಸೀಕೆರೆ ತಾಲ್ಲೂಕಿನ ಕಲೆಯನ್ನು ಪರಿಚಯ ಮಾಡಿಕೊಡುತ್ತಿದೆ. ಖ್ಯಾತ ಕನ್ನಡ ಚಲನಚಿತ್ರ ನಿರ್ದೇಶಕ ಶ್ರೀ ಬಿ. ವಿಠಲಾಚಾರ್ಯರು ಇಲ್ಲಿಂದಲೇ ಬಂದವರು.

ಇಡೀ ತಾಲ್ಲೂಕಿನಾದ್ಯಂತ ಹರಡಿರುವ ಹಲವು ಯುವಕ ಸಂಘಸಂಸ್ಥೆಗಳು ಗ್ರಾಮೀಣ ಮತ್ತು ನಗರಪ್ರದೇಶದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಜನತೆಗೆ ಸಾಹಿತ್ಯ, ಸಂಸ್ಕೃತಿ ಮತ್ತು ಸಂಗೀತಗಳ ಪ್ರಸಾರವನ್ನು ಮಾಡುತ್ತಿವೆ. ಅರಸೀಕೆರೆಯಿಂದ ಒಂದೆರಡು ಸಣ್ಣ ಪತ್ರಿಕೆಗಳೂ ಹೊರಡುತ್ತಿವೆ.

ವಾಣಿಜ್ಯ–ವ್ಯಾಪಾರ

ಬಹು ಹಿಂದಿನಿಂದಲೂ ಅರಸೀಕೆರೆ ಕರ್ನಾಟಕದ ಉತ್ತರ ಮತ್ತು ದಕ್ಷಿಣ ಭಾಗದ ಸೇತುವಾಗಿರುತ್ತದೆ. ಈ ನಗರ ಮೈಸೂರು, ಬೆಂಗಳೂರು, ಶಿವಮೊಗ್ಗ ಮತ್ತು ದಾವಣಗೆರೆಗಳೊಡನೆ ಸಾರಿಗೆ ಸಂಪರ್ಕವನ್ನು ಹೊಂದಿರುವುದರಿಂದ ವ್ಯಾಪಾರಕ್ಕೆ ಅನುಕೂಲಕರವಾದ ಕೇಂದ್ರವಾಗಿದೆ. ಇಲ್ಲಿಂದ ತೆಂಗಿನಕಾಯಿ. ಕೊಬ್ಬರಿ, ಮೆಣಸಿನಕಾಯಿ, ಹತ್ತಿ, ಎಣ್ಣೆ ಬೀಜಗಳು ಉತ್ತರ ಭಾರತದ ಅನೇಕ ಊರುಗಳಿಗೆ ರಫ್ತಾಗುತ್ತವೆ.

ಈ ತಾಲ್ಲೂಕಿನಲ್ಲಿ ಬ್ಯಾಂಕಿಂಗ್ ಸೌಲಭ್ಯ ಉತ್ತಮವಿರುತ್ತದೆ. ಮೈಸೂರು ಬ್ಯಾಂಕ್, ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್ ಮೊದಲಾದ ಹಲವು ವಾಣಿಜ್ಯ ಬ್ಯಾಂಕುಗಳ ಶಾಖೆಗಳು ಇಲ್ಲಿವೆ. ಮಾರಾಟ ಸಂಘಗಳೂ ಇಲ್ಲಿದ್ದು ವಾಣಿಜ್ಯ ವ್ಯಾಪಾರಕ್ಕೆ ಉಪಯುಕ್ತವಾಗಿವೆ. ಪ್ರತಿ ಶುಕ್ರವಾರ ಅರಸೀಕೆರೆಯಲ್ಲಿ, ಗುರುವಾರ ಗಂಡಸಿಯಲ್ಲಿ ಮತ್ತು ಭಾನುವಾರ ಬಾಣಾವರದಲ್ಲಿ ಹಾಗೂ ಕಣಕಟ್ಟೆ ಮತ್ತು ಜಾವಗಲ್‌ಗಳಲ್ಲಿ ಶುಕ್ರವಾರ ಸಂತೆ ನಡೆಯುತ್ತದೆ.

ವ್ಯವಸಾಯೋತ್ಪನ್ನಗಳಾದ ತೆಂಗು, ಕೊಬ್ಬರಿ, ಹತ್ತಿ ಮತ್ತು ಮೆಣಸಿನಕಾಯಿಗಳ ವ್ಯಾಪಾರದ ದೃಷ್ಟಿಯಿಂದ ಸರ್ಕಾರದ ವರು 1950ರಲ್ಲಿ ಅರಸೀಕೆರೆಯಲ್ಲಿ ನಿಯಂತ್ರಿತ ಮಾರುಕಟ್ಟೆಯನ್ನು ಪ್ರಾರಂಭಿಸಿದರು. ಆದರೆ ಅದು ಕಾರ್ಯೋನ್ಮುಖವಾದುದು 1952ರಲ್ಲಿ. ಇದರ ವ್ಯಾಪ್ತಿ ಅರಸೀಕೆರೆ ತಾಲ್ಲೂಕು ಮತ್ತು

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇಲೂರು ತಾಲ್ಲೂಕಿನ ಹಳೇಬೀಡು ಹೋಬಳಿಗಳಿಗೂ ಅನ್ವಯ ವಾಗುತ್ತದೆ. ಪ್ರತಿವರ್ಷ ಲಕ್ಷಾಂತರ ರೂಪಾಯಿಗಳ ವ್ಯವಹಾರ ವನ್ನು ನಡೆಸುತ್ತದೆ. ಇದರಿಂದಾಗಿ ಉತ್ಪನ್ನಗಾರರಿಗೆ ಒಳ್ಳೆಯ ಬೆಲೆ ಸಿಗುತ್ತದೆ. ಲಕ್ಷಾಂತರ ರೂಪಾಯಿ ಬೆಲೆಯ ತೆಂಗಿನ ಕಾಯಿ, ಕೊಬ್ಬರಿ, ಸೀಗು, ಬೆಲ್ಲ, ಹತ್ತಿ, ಮೆಣಸಿನಕಾಯಿ ಮತ್ತು ಎಣ್ಣೆಕಾಳುಗಳು ಈ ಮಾರುಕಟ್ಟೆಯಿಂದ ವ್ಯಾಪಾರವಾಗುತ್ತಿವೆ. ಅಲ್ಲದೆ ಬೇರೆಡೆಗೆ ರಫ್ತಾಗುತ್ತಿವೆ. ರೈತರಿಗೆ ಇದು ವರದಾನವಾಗಿದೆ.

ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು 1920ರಲ್ಲಿ ಸ್ಥಾಪಿತವಾಗಿ ರಜತ ಮಹೋತ್ಸವವನ್ನು ಆಚರಿಸಿ ಸಾರ್ಥಕ ಸೇವೆ ಸಲ್ಲಿಸಿದೆ. ಸಾಮಾನ್ಯ ಯೋಜನೆ, ತೆಂಗು ಯೋಜನೆ, ಬಾವಿ, ಟ್ರ್ಯಾಕ್ಟರ್, ಪವರ್ ಟಿಲ್ಲರ್, ಭೂ ಒಡೆತನ, ರೇಷ್ಮೆ, ಪಂಪ್‌ಸೆಟ್, ಎತ್ತು ಗಾಡಿ, ಕುರಿ ಮತ್ತು ಹೈನುಗಾರಿಕೆ ಗಾಗಿ ರೈತರಿಗೆ ಆರ್ಥಿಕ ನೆರವು ನೀಡಲಾಗುತ್ತಿದೆ. ಈ ಬ್ಯಾಂಕಿನಲ್ಲಿ ಮೂರು ಸಾವಿರಕ್ಕೂ ಹೆಚ್ಚು ಖಾತೆಗಳಿವೆ. ಕಳೆದ ಮೂರು ದಶಕ ಗಳಿಂದ ಸುಮಾರು 7,500 ಸದಸ್ಯರನ್ನು ಹೊಂದಿದ್ದು ಸುಮಾರು 3,000 ಸದಸ್ಯರಿಗೆ ಸುಮಾರು 1½ ಕೋಟಿ ರೂಪಾಯಿ ಹೆಚ್ಚಿನ ವಿವಿಧ ಯೋಜನೆಯ ಸಾಲದ ನೆರವನ್ನು ವಿತರಿಸಿ 'ಕಲ್ಪವೃಕ್ಷ'ವಾಗಿ ಬೆಳೆಯುತ್ತಿದೆ. ಈ ತಾಲ್ಲೂಕಿನಲ್ಲಿನ ಎಲ್ಲ ವಿಧದ ಬ್ಯಾಂಕುಗಳ ಸಂಖ್ಯೆ 29.

ಆರಸೀಕೆರೆ ಮಾಲೇಕಲ್ ತಿರುಪತಿ ವೆಂಕಟರಮಣ ಸ್ವಾಮಿಯ ಜಾತ್ರೆ ಪ್ರತಿ ಸಂವತ್ಸರದ ಆಷಾಢ ಶುದ್ಧ ದ್ವಾದಶಿಯಲ್ಲಿ ವೈಭವ ದಿಂದ ನಡೆಯುತ್ತದೆ. ಏಕಾದಶಿ (ಯಾಕಾಶಿ) ತೇರೆಂದು ಪ್ರಖ್ಯಾತ ವಾಗಿರುವ ಈ ಜಾತ್ರೆಗೆ ನಾಡಿನಾದ್ಯಂತ ಸಹಸ್ರಾರು ಜನ ಭಕ್ತರು ಬಂದು ಸೇರುತ್ತಾರೆ.

ಜೇನುಕಲ್ಲು 'ಸಿದ್ಧಪ್ಪನ ಜಾತ್ರೆ' ಮಾಘ ಫಾಲ್ಗುಣ ಮಾಸ

Sri Vidyabharathi Book Centre, Sringeri

 CC-O. In Public Domain. Digitized by eGangotri

ದಲ್ಲಿ ನಡೆಯುತ್ತದೆ. ಬೆಟ್ಟದಲ್ಲಿ ಜೇನುಗೂಡುಗಳಿರುವುದರಿಂದ 'ಜೇನ್‌ಕಲ್ ಬೆಟ್ಟ' ಎಂದು ಹೆಸರು ಬಂದಿದೆ. ಜಾತ್ರೆ ಕಾಲದಲ್ಲಿ ವಸ್ತುಗಳ ಮೊರಾಟ ಅದ್ಧೂರಿಯಾಗಿ ಇರುತ್ತದೆ. ತಪ್ಪು ಮಾಡಿದವರನ್ನು ಜೇನು ಬಂದು ಕಚ್ಚುವುದೆಂದು ಪ್ರತೀತಿ.

ಸಾರಿಗೆ ಸಂಪರ್ಕ

ಅರಸೀಕೆರೆ ತಾಲ್ಲೂಕಿನಲ್ಲಿ ಸಂಪರ್ಕ ವ್ಯವಸ್ಥೆ ಉತ್ತಮವಿರುತ್ತದೆ. ರಾಜ್ಯ ಹೆದ್ದಾರಿ, ಜಿಲ್ಲಾಭಿವೃದ್ಧಿ ರಸ್ತೆ ಮತ್ತು ಗ್ರಾಮೀಣ ರಸ್ತೆಗಳಲ್ಲದೆ ಸ್ವಲ್ಪ ಭಾಗ ರೈಲು ರಸ್ತೆಯಿದೆ. ಬೆಂಗಳೂರು–ಹೊನ್ನಾವರ ಹೆದ್ದಾರಿ, ಅರಸೀಕೆರೆ–ಹಾಸನ, ಅರಸೀಕೆರೆ–ಚನ್ನರಾಯಪಟ್ಟಣ, ಬಾಣಾವರ–ಸಕ್ಕರೆ ಪಟ್ಟಣ, ಬಾಣಾವರ–ಬೇಲೂರು, ಬಾಣಾವರ–ಸಿರಾ, ಅರಸೀಕೆರೆ–ಹುಳಿಯಾರ್, ಹಾರನಹಳ್ಳಿ–ಜಾವಗಲ್ ಈ ತಾಲ್ಲೂಕಿನ ಮುಖ್ಯ ರಸ್ತೆಗಳು. ಅಲ್ಲದೆ ಪ್ರತಿಯೊಂದು ಗ್ರಾಮ ತಾಲ್ಲೂಕು ಕೇಂದ್ರ ದೊಡನೆ ಸಂಪರ್ಕವಿರುವಂತೆ ಹೆದ್ದಾರಿಗೆ ಬಂದು ಕೂಡುವ ಕೂಡು ರಸ್ತೆಗಳೂ ಇವೆ. ತಾಲ್ಲೂಕು ಅಭಿವೃದ್ಧಿ ಮಂಡಳಿ ಎಲ್ಲ ಗ್ರಾಮಗಳಿಗೂ ಸಂಪರ್ಕವಿರುವಂತೆ ಶ್ರಮವಹಿಸಿ ರಸ್ತೆ ಮಾಡಿಸಿದೆ. ಸಾಧ್ಯವಾದ ಮಟ್ಟಿಗೂ ಎಲ್ಲ ಗ್ರಾಮಗಳಿಗೂ ಬಸ್ಸು, ಕಾರು, ಗಾಡಿ ಮೊದಲಾದ ವಾಹನಗಳು ಹೋಗಿಬರುತ್ತವೆ. ಹಿಂದೆ ಅರಸೀಕೆರೆ–ತಿಪಟೂರು ಮಾರ್ಗವನ್ನು ಕ್ರಮಿಸಬೇಕಾದರೆ ಒಂದು ರಾತ್ರಿ ಬೇಕಾಗುತ್ತಿತ್ತು. ರಾತ್ರಿ ಗಾಡಿ ಕಟ್ಟಿದರೆ, ಬೆಳಿಗ್ಗೆ ತಿಪಟೂರು ಮುಟ್ಟಬಹುದಿತ್ತು. ಈಗ ಹತ್ತು ನಿಮಿಷಗಳಲ್ಲಿ ತಿಪಟೂರನ್ನು ತಲುಪಿ ಮರಳಿ ಹತ್ತು ನಿಮಿಷಗಳಲ್ಲಿ ಅರಸೀಕೆರೆಯನ್ನು ಮುಟ್ಟುವ ಸಾರಿಗೆ ಸೌಲಭ್ಯವಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬೆಂಗಳೂರು–ಹೊನ್ನಾವರ ರಸ್ತೆ ಕೊನೆಹಳ್ಳಿ ಹತ್ತಿರ ಪ್ರವೇಶ ಮಾಡಿ ಮತಿಗಟ್ಟದ ಹತ್ತಿರ ಮುಗಿಯುತ್ತದೆ. ಸುಮಾರು 20 ಕಿ.ಮೀ. ರಸ್ತೆ ಸಿಮೆಂಟ್ ಕಾಂಕ್ರೀಟಿನಲ್ಲಿದೆ. ಉಳಿದುದು ಟಾರು ರಸ್ತೆ. ಇದು ಅರಸೀಕೆರೆ ಪಟ್ಟಣದ ಮಧ್ಯದಲ್ಲಿ ಹಾದು ಹೋಗುತ್ತದೆ. ಈ ರಸ್ತೆ ತಾಲ್ಲೂಕಿನ ಜೀವನಾಡಿ.

ಅರಸೀಕೆರೆ–ಹಾಸನ ರಸ್ತೆ ರಾಜ್ಯ ಹೆದ್ದಾರಿ ; ನೈಋತ್ಯ ದಿಕ್ಕಿನಲ್ಲಿದೆ. ಇದು ಬಾಗೇಶಪುರ, ದುದ್ದ ಮೂಲಕ ಜಿಲ್ಲಾಕೇಂದ್ರಕ್ಕೆ ಸಂಬಂಧವನ್ನು ಕಲ್ಪಿಸುತ್ತದೆ. ಇಡೀ ರಸ್ತೆ ಟಾರಿನದು. ಇದಕ್ಕೆ ಸಮಾನಾಂತರವಾಗಿ ಅರಸೀಕೆರೆ–ಹಾಸನ ರೈಲುಮಾರ್ಗವೂ ಹಾದು ಹೋಗುತ್ತದೆ.

ಅರಸೀಕೆರೆ–ಚನ್ನರಾಯಪಟ್ಟಣ ಮುಖ್ಯ ರಸ್ತೆ ತಾಲ್ಲೂಕು ಅಭಿವೃದ್ಧಿ ರಸ್ತೆ. ಕಳ್ಳನಕೆರೆ, ತಳ್ಳೂರು, ಹಾರನಹಳ್ಳಿ ಮತ್ತು ಗಂಡಸಿ ಮೂಲಕ ಹಾದುಹೋಗುತ್ತದೆ. ಇಡೀ ರಸ್ತೆ ಡಾಂಬರಿನದು. ಕಳ್ಳನಕೆರೆ ಹತ್ತಿರ ಅರಸೀಕೆರೆ–ಹಾಸನ ರೈಲುರಸ್ತೆ ಅಡ್ಡ ಹಾಯುತ್ತದೆ.

ಬಾಣಾವರ–ಬೇಲೂರು ರಸ್ತೆ ಟಾರು ರಸ್ತೆಯಾಗಿದ್ದು ಅರಕೆರೆ, ಕಲ್ಲುಹಳ್ಳಿ, ಜಾವಗಲ್, ಹಳೇಬೀಡಿನ ಮೂಲಕ ಬೇಲೂರಿಗೆ ಹೋಗುತ್ತದೆ. ಪ್ರಸಿದ್ಧ ಕಲೆಗಳ ಬೀಡಾದ ಹಳೇಬೀಡು ಮತ್ತು ಬೇಲೂರುಗಳಿಗೆ ಪ್ರವಾಸಿಗರು ಬಾಣಾವರ ರೈಲ್ವೆ ನಿಲ್ದಾಣದಿಂದ ಸಂಪರ್ಕ ಪಡೆಯಬಹುದು. ಬಾಣಾವರ–ಸಿರಾ ರಸ್ತೆ ಹೆಚ್ಚು ಕಡಿಮೆ ಟಾರು ರಸ್ತೆಯಾಗಿದ್ದು ಈಶಾನ್ಯ ದಿಕ್ಕಿನ ಕಲ್ಲುಂಡಿ, ಕಣಕಟ್ಟೆ ಮೂಲಕ ಹಾದು ಹೋಗುತ್ತದೆ. ಇದು ಉತ್ತರದ ಚಿತ್ರದುರ್ಗ ಮೊದಲಾದ ಸ್ಥಳಗಳ ಸಂಪರ್ಕಬಿಂದುವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರತಿಯೊಂದು ಹಳ್ಳಿಗೂ ರಸ್ತೆಯ ಸಂಪರ್ಕವಿದೆ. ಅದರೊಡನೆ ಸಾಧ್ಯವಾದಷ್ಟು ಮಟ್ಟಿಗೆ ದಿನದಲ್ಲಿ ಒಂದು ಬಾರಿ ತಾಲ್ಲೂಕಿನ ಮತ್ತು ಜಿಲ್ಲಾ ಸಂಪರ್ಕಕ್ಕೆ ಅನುಕೂಲವಿದೆ.

ಈ ತಾಲ್ಲೂಕಿನ ಸಾರಿಗೆ ಸಾಧನಗಳೆಂದರೆ ಎತ್ತಿನಗಾಡಿ, ಬೈಸಿಕಲ್, ಮೋಟಾರು ಸೈಕಲ್, ಕಾರುಗಳು, ಲಾರಿ ಮತ್ತು ಬಸ್ಸುಗಳು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಹಾಸನ ವಿಭಾಗ ಪ್ರಾರಂಭವಾದ ಮೇಲೆ 1961ರಲ್ಲಿ ಅರಸೀಕೆರೆ ಕಾರ್ಯಾಗಾರ ಪ್ರಾರಂಭವಾಯಿತು. ಅರವತ್ತೈದು ಮಾರ್ಗಗಳಲ್ಲಿ ಸುಮಾರು 69 ಬಸ್ಸುಗಳು ಬಹುತೇಕ ಗ್ರಾಮಗಳಿಗೆ ಸಂಪರ್ಕ ವೀಯುತ್ತವೆ. ಅರಸೀಕೆರೆ ಕಾರ್ಯಗಾರ ತೃಪ್ತಿಕರವಾಗಿ ಸೇವೆ ಸಲ್ಲಿಸುತ್ತಿದೆ. ಜನರ ಮೆಚ್ಚಿಗೆಯನ್ನು ಪಡೆದಿದೆ.

ಬೆಂಗಳೂರು–ಪೂನಾ ರೈಲ್ವೆ ರಸ್ತೆ, ಹೊನ್ನವಳ್ಳಿ ರಸ್ತೆಯಿಂದ ಬಾಣಾವರದವರೆಗೆ ಮತ್ತು ಅರಸೀಕೆರೆ–ಮೈಸೂರು ವಿಭಾಗದಲ್ಲಿ ಅರಸೀಕೆರೆಯಿಂದ ದುದ್ದದವರೆಗೆ ಇರುವ ಮಾರ್ಗಗಳು. ಇವು ಈ ತಾಲ್ಲೂಕಿನಲ್ಲಿರುವ ಮೀಟರ್‌ಗೇಜ್ ರೈಲ್ವೆ ಸಂಪರ್ಕ. ಅರಸೀಕೆರೆ ರೈಲ್ವೆ ಜಂಕ್ಷನ್ ಆಗಿರುವುದರಿಂದ ಇಲ್ಲಿಂದ ಮೈಸೂರು, ಬೆಂಗಳೂರು, ದಾವಣಗೆರೆ, ಹುಬ್ಬಳ್ಳಿಗಳಿಗೆ ರೈಲು ಸಂಪರ್ಕವಿದೆ.

ಅರಸೀಕೆರೆ ತಾಲ್ಲೂಕಿನ ಎಲ್ಲ ರಸ್ತೆಗಳ ಒಟ್ಟು ಉದ್ದ 1,008 ಕಿ.ಮೀ.ಗಳು. ಅಂಚೆ, ತಂತಿ, ದೂರವಾಣಿ ಮುಂತಾದ ಆಧುನಿಕ ಸಂಪರ್ಕ ಮಾಧ್ಯಮಗಳ ಅನುಕೂಲವಿದೆ. ಈ ತಾಲ್ಲೂಕಿನಲ್ಲಿ 72 ಅಂಚೆಕಛೇರಿಗಳೂ, 152 ಟಪ್ಪಾಲು ಪೆಟ್ಟಿಗೆಗಳೂ, 11 ತಂತಿ ಕಛೇರಿಗಳು, 17 ದೂರವಾಣಿ ಕೇಂದ್ರಗಳು, 628 ದೂರವಾಣಿಗಳು, 12,492 ರೇಡಿಯೋಗಳು ಮತ್ತು 17 ಮುದ್ರಣಾಲಯಗಳಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಮಾಜಿಕ ಸೇವೆಗಳು

ಅರಸೀಕೆರೆ ತಾಲ್ಲೂಕಿನಲ್ಲಿ ಅನೇಕ ಸಾರ್ವಜನಿಕ ಸಂಘ ಸಂಸ್ಥೆಗಳು ಹಲವಾರು ರೀತಿಯಲ್ಲಿ ಸೇವೆ ಸಲ್ಲಿಸುತ್ತಿವೆ. ಅವುಗಳಲ್ಲಿ ಪ್ರಸಿದ್ಧವಾದುವೆಂದರೆ ಅರಸೀಕೆರೆ ಹತ್ತಿರವಿರುವ 'ಕಸ್ತೂರಿಬಾ ಗ್ರಾಮ'ದ 'ಸಾರ್ವಜನಿಕ ಸಂಘ' ಗಣನೀಯವಾದ ಸೇವೆ ಸಲ್ಲಿಸುತ್ತಿದೆ. ಇದು ಬಾಲವಾಡಿ, ಕೈಗಾರಿಕಾ ಶಾಲೆ ಮತ್ತು ಆರೋಗ್ಯ ಕೇಂದ್ರಗಳನ್ನು ನಡೆಸುತ್ತಿದೆ. ಮಹಾತ್ಮ ಗಾಂಧೀಜಿ ಯವರು ಇದರ ಮೊಟ್ಟ ಮೊದಲ ಅಧ್ಯಕ್ಷರು. ಈ ಕೇಂದ್ರವು ರೂಪುಗೊಂಡದ್ದು ಅವರ ಕಾಲದಲ್ಲಿಯೇ. ಇದು ಗ್ರಾಮಸೇವಕ ಯರ ತರಬೇತಿ ಕೇಂದ್ರವಾಗಿದೆ. ಅಲ್ಲದೆ ದಾದಿ ಮತ್ತು ಸಹಾಯಕ ರಿಗೂ ತರಬೇತಿ ನೀಡುತ್ತಿದೆ. ಈ ಕೇಂದ್ರಕ್ಕೆ 90 ಎಕರೆ ವಿಸ್ತೀರ್ಣದ ಪ್ರದೇಶವಿದ್ದು, ಅಲ್ಲಿ ತೆಂಗು, ಬತ್ತ ಮತ್ತು ಇತರೆ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಈ ಸಂಸ್ಥೆಯು ಬಾಲವಾಡಿ ಮತ್ತು ಹೆಣ್ಣು ಮಕ್ಕಳ ನಿವಾಸ ಶಾಲೆಗಳನ್ನು ನಡೆಸುತ್ತಿದೆ. 'ಕಸ್ತೂರಿಬಾ ಗ್ರಾಮ' ಸೇವೆಯ ಸಂಕೇತದ ಹೆಸರಾಗಿ ಪ್ರಸಿದ್ಧವಾಗಿದೆ.

ಅರಸೀಕೆರೆಯ 'ವಾಣಿ ಮಹಿಳಾ ಸಮಾಜ' 1939ರಲ್ಲಿ ಸ್ಥಾಪನೆಯಾಗಿ ಸ್ತ್ರೀಯರ ಮತ್ತು ಮಕ್ಕಳ ಕಲ್ಯಾಣಕ್ಕೆ ಹೆಚ್ಚಿನ ಸೇವೆ ಸಲ್ಲಿಸುತ್ತಿದೆ. ಹೆಂಗರಿಗೆ ಕೈಕೆಲಸ, ಕಸೂತಿ, ಹೊಲಿಗೆ, ಅಂಬರ ಚರಕ ತರಗತಿಗಳನ್ನು ನಡೆಸುತ್ತಿದೆಯಲ್ಲದೆ ಬಾಲವಾಡಿಯನ್ನೂ ನಡೆಸುತ್ತಿದೆ. ಈ ಸಮಾಜವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಅನುದಾನ ಪಡೆಯುತ್ತಿದೆ. 'ಪಾರ್ವತಿ ಮಹಿಳಾ ಸಮಾಜ' 1959ರಲ್ಲಿ ಸ್ಥಾಪಿತವಾದ ಮತ್ತೊಂದು ಮಹಿಳಾ ಸಂಸ್ಥೆ. ಈ ಸಮಾಜ ಸ್ವಂತ ಕಟ್ಟಡವನ್ನು ಹೊಂದಿದ್ದು, ಮಹಿಳೆಯರ ಶಿಕ್ಷಣಾಭಿವೃದ್ಧಿಯನ್ನು ನೋಡಿಕೊಳ್ಳುತ್ತಿದೆ. ಬಾಣಾ

Vidyasiri Granthamala Book Centre, Bangalore

CC-O. In Public Domain. Digitized by eGangotri

ವರದ 'ಗೀತಾ ಮಹಿಳಾ ಸಮಾಜ' 1958ರಲ್ಲಿ ಸ್ಥಾಪಿತವಾಯಿತು. ಮಕ್ಕಳ ಮತ್ತು ಮಹಿಳೆಯರ ಸಾಮಾಜಿಕ ಮತ್ತು ಶೈಕ್ಷಣಿಕ ಮೌಲ್ಯಗಳನ್ನು ಅಭಿವೃದ್ಧಿಪಡಿಸಲು ರಾಜ್ಯದ ಸಮಾಜ ಕಲ್ಯಾಣ ಮಂಡಳಿಯ ಸಹಕಾರದಿಂದ ಶಿಶುವಿಹಾರ, ಹಿಂದಿ, ಸಂಗೀತ, ಹೊಲಿಗೆ ಮತ್ತು ಕಸೂತಿ ತರಗತಿಗಳನ್ನು ನಡೆಸುತ್ತಿದೆ.

1959ರಲ್ಲಿ ಸ್ಥಾಪನೆಯಾದ ರೋಟರಿ ಕ್ಲಬ್ ಅರಸೀಕೆರೆಯಲ್ಲಿ ಗಣನೀಯವಾಗಿ ಸೇವೆ ಸಲ್ಲಿಸುತ್ತಿದೆ. ಬುಕ್‌ಬ್ಯಾಂಕ್ ಸ್ಥಾಪನೆ, ಸರ್ಕಾರಿ ಪ್ರೌಢಶಾಲೆಗೆ ಹೆಚ್ಚಿನ ಕೊಠಡಿಗಳನ್ನು ಕಟ್ಟಿಸಲು ಈ ಸಂಸ್ಥೆ ನೆರವಾಗಿದೆ. ಹಲವಾರು ಯುವಕ ಮಂಡಲಗಳು ಈ ತಾಲ್ಲೂಕಿನಲ್ಲಿದ್ದು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಗಾಗ್ಗೆ ಏರ್ಪಡಿಸುತ್ತವೆ. ಈ ಮಂಡಲಗಳ ಸೇವೆ ಗಮನಾರ್ಹವಾಗಿರುತ್ತಿದೆ. ಈ ತಾಲ್ಲೂಕಿನಲ್ಲಿ ಎಲ್ಲ ವಿಧದ ಸಹಕಾರ ಸಂಘಗಳ ಸಂಖ್ಯೆ 118.

ವೈದ್ಯಕೀಯ ಮತ್ತು ಕುಟುಂಬಕಲ್ಯಾಣ

ಈ ತಾಲ್ಲೂಕಿನಲ್ಲಿ ಆಯುರ್ವೇದ ಮತ್ತು ಯುನಾನಿ ಪದ್ಧತಿ ಬಹು ಹಿಂದಿನಿಂದ ರೂಢಿಯಲ್ಲಿದೆ. ಸಾಮಾನ್ಯವಾಗಿ ಇಲ್ಲಿ ಹಳ್ಳಿಗೊಬ್ಬ ನಾಟಿ ವೈದ್ಯರಿರುತ್ತಾರೆ. ಆಧುನಿಕ ವೈದ್ಯಕೀಯ ಅಭ್ಯಾಸ ಪ್ರಾರಂಭವಾದ ಮೇಲೆ ಆರೋಗ್ಯ ಮತ್ತು ವೈದ್ಯಕೀಯ ಇಲಾಖೆಗಳು ಅಸ್ತಿತ್ವಕ್ಕೆ ಬಂದವು. ಅರಸೀಕೆರೆಯ ಬಹುಭಾಗ ಬಯಲುಸೀಮೆಯಾಗಿರುವುದರಿಂದ ಒಳ್ಳೆಯ ಹವಾಮಾನವಿದೆ. ಅರಸೀಕೆರೆ ಪಟ್ಟಣದಲ್ಲಿ ಸುಸಜ್ಜಿತವಾದ ಆಸ್ಪತ್ರೆಯಿದೆ. ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಔಷಧಾಲಯಗಳು ಸೇವೆ ಸಲ್ಲಿಸುತ್ತಿವೆ. ಅರಸೀಕೆರೆ, ಜಾವಗಲ್, ಕಣಕಟ್ಟೆ, ಬಾಣಾವರ,

Siddhanta eGangotri Gyaan Central Trust, Bharadwaj

CC-O. In Public Domain. Digitized by eGangotri

ಜಾವಗಲ್, ಜಯಚಾಮರಾಜಪುರ ಮತ್ತು ಅರಸೀಕೆರೆಯಲ್ಲಿ ಇರುವ ವೈದ್ಯಶಾಲೆಗಳು ಸ್ಥಳೀಯ ಸಂಸ್ಥೆಗಳಿಗೆ ಸೇರಿದವುಗಳು. ದುಮ್ಮೇನಹಳ್ಳಿ, ಬಾಗೇಶಪುರ, ಬೆಳಗುಂಬ, ಚಿಕ್ಕೋಡು, ದೊಡ್ಡ ಮೇಟಿಕುರ್ಕೆ, ಯಡವನಹಳ್ಳಿ, ಕಲ್ಲುಂಡಿ, ಕುರುವಂಕ, ದೋಣನ ಕಟ್ಟೆ, ಕರಿಗುಂದ, ಒರಂಡನಹಳ್ಳಿ, ತೊಂಡಿಗಾನಹಳ್ಳಿ ಮತ್ತು ಕೋಳಗುಂದಗಳಲ್ಲಿ ಆಯುರ್ವೇದ ಆಸ್ಪತ್ರೆಗಳಿವೆ. ಅಲ್ಲದೆ ಅನೇಕ ಖಾಸಗಿ ವೈದ್ಯಶಾಲೆಗಳಿವೆ.

ಹದಿನಾರು ಕುಟುಂಬ ಕಲ್ಯಾಣ ಕೇಂದ್ರಗಳು ಈ ತಾಲ್ಲೂಕಿನಲ್ಲಿ ಸೇವೆ ಸಲ್ಲಿಸುತ್ತಿವೆ. ರಾಷ್ಟ್ರೀಯ ಮಲೇರಿಯಾ ಪ್ರತಿಬಂಧಕ ಕಾರ್ಯಕ್ರಮದನ್ವಯ ಈ ತಾಲ್ಲೂಕಿನಲ್ಲಿ ಒಂದು ಘಟಕವಿದ್ದು ಇದು ಸಿಡುಬು, ಮಲೇರಿಯಾ, ಕಾಲರಾ, ಪ್ಲೇಗು, ಕುಷ್ಟ, ಕ್ಷಯ ಮೊದಲಾದ ಅಂಟುಜಾಡ್ಯಗಳನ್ನು ಪ್ರತಿಬಂಧಿಸುವುದು, ಕುಟುಂಬ ಯೋಜನೆ, ಹೆರಿಗೆ ಮತ್ತು ಮಕ್ಕಳ ಆರೋಗ್ಯ ಸೇವೆ, ಪರಿಸರದ ನೈರ್ಮಲ್ಯವನ್ನು ಕಾಪಾಡುವುದು—ಹೀಗೆ ನಾನಾ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿದೆ.

ಈ ತಾಲ್ಲೂಕಿನಲ್ಲಿ ಒಟ್ಟು 10 ತಾಲ್ಲೂಕು ಅಭಿವೃದ್ಧಿ ಮಂಡಳಿ ಔಷಧಾಲಯಗಳೂ, ಎರಡು ಪ್ರಾಥಮಿಕ ಆರೋಗ್ಯ ಕೇಂದ್ರಗಳೂ, 13 ಪ್ರಾಥಮಿಕ ಆರೋಗ್ಯ ಘಟಕಗಳೂ ಇರುತ್ತವೆ.

ಜನರ ಆರ್ಥಿಕ ಸ್ಥಿತಿ

ಅರಸೀಕೆರೆ ತಾಲ್ಲೂಕು ಭೌಗೋಳಿಕವಾಗಿ ಬಹುಭಾಗ ಬಯಲುಸೀಮೆ. ಇಲ್ಲಿ ಮಳೆ ಕಡಿಮೆ. ದಟ್ಟ ಕಾಡುಗಳಿಲ್ಲದ ಕುರುಚಲು ಗಿಡಗಳಿರುವ ಪ್ರದೇಶ. ಭೂಮಿಯೇನೋ ಅಲ್ಲಲ್ಲಿ ಫಲವತ್ತಾಗಿದ್ದರೂ, ಸಾಕಷ್ಟು ಜಲಸಂಪತ್ತಿಲ್ಲದೆ ಬಡವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆರೆಗಳೇ ಜಲಸಮೃದ್ಧಿಯ ಮೂಲಗಳು. ತಗ್ಗಿನ ಪ್ರದೇಶದಲ್ಲಿ ವ್ಯಾಪಾರಿ ಬೆಳೆಯಾದ ತೆಂಗು ಇದ್ದರೂ ಸಾಕಷ್ಟು ಮಳೆಯಿಲ್ಲದೆ, ತೆಂಗು ವ್ಯವಸಾಯ ಹೆಚ್ಚು ಫಲಕಾರಿಯಾಗಿಲ್ಲ. ಹೀಗಾಗಿ ಜನರು ಮಳೆಯನ್ನೇ ನಂಬಿ ಬದುಕಬೇಕಾಗಿದೆ. ಇದರಿಂದ ಇಲ್ಲಿಯ ಜನಸಾಮಾನ್ಯರು ಆರ್ಥಿಕವಾಗಿ ಬಹಳ ಹಿಂದುಳಿದಿದ್ದಾರೆ. ವ್ಯಕ್ತಿಯ ತಲಾ ವರಮಾನ ಬಹು ಕಡಿಮೆ. ಈ ದೃಷ್ಟಿಯಿಂದ ಅರಸೀಕೆರೆ ತಾಲ್ಲೂಕಿನ ಪರಿಸ್ಥಿತಿಯನ್ನು ಬಹು ಗಂಭೀರವಾಗಿ ಯೋಚಿಸಬೇಕಾಗಿದೆ. ಅನಿಶ್ಚಯದ ಮಳೆಗಾಲ, ಹಿಂದೆ ಬಿದ್ದಿರುವ ಕೈಗಾರಿಕೆ, ನೀರಾವರಿ ಯೋಜನೆಗಳು ಇವುಗಳಿಂದಾಗಿ ಜನರು ತೆಂಗೊಂದನ್ನೇ ನಂಬುವಂತೆ ಆಗಿದೆ. ಇರುವ ಸಂಪನ್ಮೂಲಗಳನ್ನು ಬಳಸಿಕೊಂಡು ಅರಸೀಕೆರೆಯನ್ನು ಸರ್ವಾಂಗೀಣವಾಗಿ ಅಭಿವೃದ್ಧಿ ಪಡಿಸಲು ಯತ್ನಿಸಬೇಕಾಗಿದೆ.

ಆಡಳಿತ ಕ್ರಮ : ಅಂದು–ಇಂದು

ಪ್ರಾಚೀನ ಕಾಲದಲ್ಲಿ ಆಡಳಿತವನ್ನು ಆಳರಸರ ಆಜ್ಞೆಯ ಮೇರೆಗೆ ಸ್ಥಳೀಯ ಅಧಿಕಾರಿಗಳೇ ನಡೆಸುತ್ತಿದ್ದರು. ತಪ್ಪು ಮಾಡಿದವರಿಗೆ ಉಗ್ರವಾದ ದಂಡನೆ ಕೊಡಲಾಗುತ್ತಿತ್ತು. ತೆರಿಗೆ ಪದ್ಧತಿ ವಿಸ್ತೃತವಾಗಿತ್ತು.

ಕಾಲಕಾಲಕ್ಕೆ ಸಾಮಾನ್ಯ ಆಡಳಿತ ಬದಲಾಗುತ್ತಾ ಬಂದಿತು. 1882ರಲ್ಲಿ ಅರಸೀಕೆರೆ ತಾಲ್ಲೂಕು ರೂಪುಗೊಂಡಾಗ ಜಾವಗಲ್ ಮತ್ತು ಬಾಣಾವರ ಹೋಬಳಿಗಳು ಸೇರಿದ್ದವು.

ಅರಸೀಕೆರೆ ಹಾಸನ ಉಪವಿಭಾಗಕ್ಕೆ ಸೇರಿದ ಜಿಲ್ಲೆಯ ಉತ್ತರದ ತಾಲ್ಲೂಕು. ತಹಶೀಲ್ದಾರರೇ ತಾಲ್ಲೂಕಿನ ಪ್ರಮುಖ ದಂಡಾಧಿಕಾರಿಗಳೂ, ಕಂದಾಯದ ಅಧಿಕಾರಿಗಳೂ ಆಗಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲಿನ ತಾಲ್ಲೂಕು ಕಛೇರಿಯಲ್ಲಿ ಸುಮಾರು ನಲವತ್ತು ಜನ ಸಿಬ್ಬಂದಿಯವರು ಸೇವೆ ಸಲ್ಲಿಸುತ್ತಿದ್ದಾರೆ. ಪ್ರತಿ ಹೋಬಳಿಗೂ ಒಬ್ಬ ಕಂದಾಯದ ಮೇಲ್ವಿಚಾರಕರು ಮತ್ತು ಪ್ರತಿ ಗ್ರಾಮ ಪಂಚಾಯಿತಿಗೂ ಗ್ರಾಮಲೆಕ್ಕಿಗರಿರುತ್ತಾರೆ. ಬಹು ಮುಖ್ಯವಾದ ಕಂದಾಯದ ಇಲಾಖೆ ಹೀಗೆ ಕೆಲಸ ಮಾಡುತ್ತದೆ.

ಗ್ರಾಮ ಪಂಚಾಯಿತಿಗಳು ಆಡಳಿತದ ಕನಿಷ್ಠ ಘಟಕ ಗಳಾಗಿದ್ದು ಆಯಾ ಪಂಚಾಯಿತಿಗೆ ಸೇರಿದ ಗ್ರಾಮಗಳ ನೈರ್ಮಲ್ಯ, ಶಾಂತಿಯನ್ನು ಕಾಪಾಡುವ ಹೊಣೆಯನ್ನು ಹೊತ್ತಿವೆ. ಪ್ರತಿ ಪಂಚಾಯಿತಿಯಲ್ಲೂ ಹನ್ನೆರಡಕ್ಕಿಂತ ಹೆಚ್ಚಿನ ಸದಸ್ಯರನ್ನು ವಯಸ್ಕರ ಮತದಾನ ಪದ್ಧತಿಯಿಂದ ಆರಿಸಲಾಗುವುದು. ಅದು ಗ್ರಾಮೀಣ ಜನತೆಯ ಕ್ಷೇಮಾಭಿವೃದ್ಧಿಗೆ ಸೇವೆ ಸಲ್ಲಿಸುತ್ತಿದೆ.

ತಾಲ್ಲೂಕು ಅಭಿವೃದ್ಧಿ ಮಂಡಳಿ, ಗ್ರಾಮ ಮತ್ತು ಪಟ್ಟಣ ಗಳ ಕೊಂಡಿಯಾಗಿದೆ. ಗ್ರಾಮೀಣ ಪಂಚಾಯಿತಿ ಮತ್ತು ಸ್ಥಳೀಯ ಮಂಡಳಿ 1959ರ ನಿಯಮದಂತೆ 1960ರಲ್ಲಿ ಅಸ್ತಿತ್ವಕ್ಕೆ ಬಂದಿತು. ತಾಲ್ಲೂಕು ಅಭಿವೃದ್ಧಿ ಮಂಡಳಿಯ ವ್ಯಾಪ್ತಿಗೆ 74 ಗ್ರಾಮ ಪಂಚಾಯಿತಿಗಳು ಬರುತ್ತವೆ. ಇದು 19 ಸದಸ್ಯ ಬಲ ವನ್ನು ಹೊಂದಿದ್ದು 16 ಜನ ಸಾಮಾನ್ಯ ಸದಸ್ಯರು ಮತ್ತು ಮೂವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ಮೀಸಲಾಗಿದೆ. ಜೊತೆಗೆ ಆರಸೀಕೆರೆ ಮತ್ತು ಗಂಡಸಿಯ ವಿಧಾನ ಸಭಾ ಸದಸ್ಯರು ಮಂಡಳಿಯ ಸದಸ್ಯರಾಗಿರುತ್ತಾರೆ.

ಚುನಾಯಿತ ಸದಸ್ಯರಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷ ರನ್ನು ಆರಿಸಲಾಗುವುದು. ತಾಲ್ಲೂಕಿನ ಅಭಿವೃದ್ಧಿಯ ಅಧಿಕಾರಿ ಇದರ ಕಾರ್ಯನಿರ್ವಾಹಕ ಅಧಿಕಾರಿಗಳು. ಇವರು ಮಂಡಳಿ ತಾಲ್ಲೂಕಿನ ಅಭಿವೃದ್ಧಿಯತ್ತ ಗಮನ ಹರಿಸಲು ನೆರವು, ನೀಡುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಂಡಳಿ ಅಭಿವೃದ್ಧಿ ಕಾರ್ಯಗಳೆಂದರೆ ರಸ್ತೆ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ ಶಾಲಾ ಕಟ್ಟಡಗಳ ವಿಸ್ತರಣೆ, ಸಣ್ಣ ನೀರಾವರಿ ಕಾಮಗಾರಿ, ಕೆರೆಕಟ್ಟೆ ರಿಪೇರಿ, ವ್ಯವಸಾಯ ಮತ್ತು ಜನತೆಗೆ ಅನುಕೂಲವಾಗುವಂತಹ ಇತ್ಯಾದಿ— ಅಭಿವೃದ್ಧಿಯ ಕಾರ್ಯಕ್ರಮಗಳತ್ತ ಗಮನ ಹರಿಸಿದೆ. ತಾಲ್ಲೂಕಿನಲ್ಲಿರುವ ಖಾಸಗಿ ಪ್ರೌಢಶಾಲೆಗಳಿಗೆ, ಯುವಜನ ಸಂಘಗಳಿಗೆ, ಮಹಿಳಾ ಸಮಾಜ ಮತ್ತು ಶಿಶುವಿಹಾರಗಳಿಗೆ, ಕಾಲೇಜಿಗೆ, ರಾಜ್ಯದ ಪಂಚಾಯತ್ ಪರಿಷತ್ತಿಗೆ, ರೆಡ್‌ಕ್ರಾಸ್ ಸೊಸೈಟಿಗೆ, ಭಾರತದ ಸ್ಕೌಟ್ಸ್ ಮತ್ತು ಗೈಡ್ಸ್, ತಾಲ್ಲೂಕುಮಟ್ಟದ ಕ್ರೀಡಾ ಸಮಿತಿ, ಹಾಸನದ ಎಲ್.ವಿ. ತಾಂತ್ರಿಕ ಶಾಲೆ ಮತ್ತು ನೆಹರು ಸ್ಮಾರಕ ಸ್ಥಾಯೀ ಮಂಡಳಿಗೆ ಸುಮಾರು ಒಂದು ಲಕ್ಷಕ್ಕೂ ಮೀರಿ ಧನಸಹಾಯ ನೀಡಿ ಪ್ರೋತ್ಸಾಹಿಸಿದೆ.

ಕಟ್ಟಡಗಳು, ರಸ್ತೆ ಮತ್ತು ಸೇತುವೆಗಳು, ಪ್ರಾಥಮಿಕ ಶಾಲಾ ಕೊಠಡಿ, ಸಂತೆ ಮೈದಾನಗಳ ದುರಸ್ತಿ, ಆಸ್ಪತ್ರೆ ಮತ್ತು ಔಷಧಾಲಯಗಳಿಗೆ ನೆರವು, ಕೈಗಾರಿಕೆ ಮತ್ತು ವ್ಯವಸಾಯ ಪ್ರದರ್ಶನ, ದನಗಳ ಮತ್ತು ತರಕಾರಿ ಪ್ರದರ್ಶನ, ನಾಡಹಬ್ಬ ಮೊದಲಾದವುಗಳನ್ನು ಆಚರಿಸಲು ನೆರವು ನೀಡುತ್ತಿದೆ. ತಾಲ್ಲೂಕಿನಲ್ಲಿರುವ 13 ಗ್ರಾಮೀಣ ಪ್ರದೇಶದ ಔಷಧಾಲಯಗಳಿಗಾಗಿ, ತಾಲ್ಲೂಕಿನ ಮೂರು ಪ್ರಸಿದ್ಧ ಸಂತೆಗಳ ಅಭಿವೃದ್ಧಿಗಾಗಿಯೂ ಸಾಕಷ್ಟು ಹಣ ಖರ್ಚುಮಾಡುತ್ತಿದೆ.

ಅರಸೀಕೆರೆ ಮತ್ತು ಬಾಣಾವರದಲ್ಲಿ ಪುರಸಭೆಗಳಿವೆ. 1882 ರಲ್ಲಿ ಮೂರನೆಯ ದರ್ಜೆಯ ಪುರಸಭೆಯಾಗಿ ಅರಸೀಕೆರೆ ಪುರಸಭೆ ಕಾರ್ಯಾರಂಭ ಮಾಡಿತು. ಹಾಸನದ ಜಿಲ್ಲಾಧಿಕಾರಿಗಳೇ ಅದರ ಅಧ್ಯಕ್ಷರಾಗಿದ್ದರು. ತಾಲ್ಲೂಕು ತಹಶೀಲ್ದಾರರು, ಉಪಾಧ್ಯಕ್ಷರು ಅಧಿಕಾರ ಪ್ರಯುಕ್ತ ಮತ್ತು ನಾಮಕರಣ ಸದಸ್ಯರು ಸಮಿತಿಯಲ್ಲಿ

CC-O. In Public Domain. Digitized by Sri Vidyabharathi Book Centre, Sringeri

CC-O. In Public Domain. Digitized by eGangotri

ಇರುತ್ತಿದ್ದರು. 1947ರಲ್ಲಿ ಇಪ್ಪತ್ತು ಚುನಾಯಿತ ಸದಸ್ಯರು ಸಮಿತಿಯಲ್ಲಿ ಇದ್ದರು. ಅಧಿಕಾರೇತರ ಅಂದರೆ ಚುನಾಯಿತ ಸದಸ್ಯರಲ್ಲೇ ಅಧ್ಯಕ್ಷರನ್ನು ಆಯ್ಕೆ ಮಾಡಲಾಯಿತು. ಪ್ರಸ್ತುತ ಹತ್ತೊಂಭತ್ತು ಸದಸ್ಯರು ಹಾಗೂ ಇಬ್ಬರು ಖಾಯಂ ಸದಸ್ಯರ ಬಲ ಹೊಂದಿದೆ.

ಪುರಸಭೆ ಪುರದ ನೈರ್ಮಲ್ಯ, ನೀರು, ಬೆಳಕು ಮೊದಲಾದ, ಅವಶ್ಯಕವಾಗಿ ಪೌರರಿಗೆ ಸಲ್ಲಬೇಕಾದ ಅನುಕೂಲಗಳ ಕಡೆ ಗಮನ ಹರಿಸಿತು. 1970ರಲ್ಲಿ ಪ್ರಧಾನಾಧಿಕಾರಿ, ಆರೋಗ್ಯ ತನಿಖಾಧಿಕಾರಿ ಮತ್ತು ಐವತ್ತು ಜನ ಸಹಾಯಕ ಸಿಬ್ಬಂದಿಯನ್ನು ನೇಮಕ ಮಾಡಿತು.

1959ರಲ್ಲಿ ಅರಸೀಕೆರೆಯಲ್ಲಿ ಲಕ್ಷ್ಮೀಪುರದ ನೈರ್ಮಲ್ಯ ಮಂಡಳಿ ಸ್ಥಾಪನೆಯಾಗಿ, ಪಟ್ಟಣದ ನೈರ್ಮಲ್ಯ ಮತ್ತು ಆರೋಗ್ಯದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತಿತು. ಆಮೇಲೆ ಅದು ಅರಸೀಕೆರೆ ಪುರಸಭೆಯೊಡನೆ ವಿಲೀನವಾಯಿತು. ಅರಸೀಕೆರೆಯಲ್ಲಿ ಕುಡಿಯುವ ನೀರು ಪೂರೈಕೆಯ ವ್ಯವಸ್ಥೆ ಇನ್ನೂ ಸುಧಾರಿಸಬೇಕಾಗಿದೆ.

ಬಾಣಾವರ ಪುರಸಭೆ 1924 ರಲ್ಲಿ ಸ್ಥಾಪನೆಗೊಂಡು, 1951ರ ಪುರಸಭಾ ನಿಯಮಾವಳಿಯ ತಿದ್ದುಪಡಿಯಂತೆ ಪುರಸಭೆಯಾಗಿ ಮಾನ್ಯತೆ ಪಡೆಯಿತು. ಪಟ್ಟಣವನ್ನು ಮೂರು ವಿಭಾಗಗಳನ್ನಾಗಿ ಮಾಡಲಾಗಿದೆ. ಹದಿನೈದು ಸದಸ್ಯಬಲವಿರುವ ಒಟ್ಟು ಸ್ಥಾನಗಳಲ್ಲಿ ಒಂದನ್ನು ಸ್ತ್ರೀಯರಿಗಾಗಿ ಮೀಸಲಿರಿಸಿದೆ. ಪಟ್ಟಣವನ್ನು ಪಶ್ಚಿಮದತ್ತ ವಿಸ್ತರಿಸಲಾಗಿದೆ. ಸ್ಥಳೀಯ ಆಸ್ಪತ್ರೆ, ಪಶುವೈದ್ಯಶಾಲೆ, ರಸ್ತೆ, ನೀರು ಮತ್ತು ನೈರ್ಮಲ್ಯದತ್ತ ಗಮನಾರ್ಹವಾದ ಸೇವೆ ಸಲ್ಲಿಸುತ್ತಿದೆ. ಶಿಶುವಿಹಾರ, ಮಹಿಳಾ ಸಮಾಜ ಮುತ್ತಿತರ ಸಾರ್ವಜನಿಕ ಸಂಸ್ಥೆಗಳಿಗೆ ನೆರವು ನೀಡು

Sri Vidyabharathi Book Centre, Shringeri

CC-O. In Public Domain. Digitized by eGangotri

ತ್ತಿದೆ. ಸುಮಾರು ಐದು ಲಕ್ಷ ರೂಪಾಯಿಗಳ ನೀರು ಸರಬರಾಜು ಯೋಜನೆ ಫಲಪ್ರದವಾಗಿ ಕೆಲಸ ಮಾಡುತ್ತಿದೆ. ಇದು ಪುರದ ಎಲ್ಲ ಸೌಕರ್ಯಗಳತ್ತ ಗಮನಹರಿಸಿದೆ. ಇತ್ತೀಚೆಗೆ ಮಂಡಲ ಪಂಚಾಯಿತಿಗಳು ರೂಪುಗೊಂಡಿರುತ್ತವೆ.

ಕಾನೂನು ಪದ್ಧತಿ

ಕಾನೂನು ಮತ್ತು ಸಾರ್ವಜನಿಕ ರಕ್ಷಣೆ ಹಾಗೂ ಶಾಂತಿ ಪಾಲನೆ ದೃಷ್ಟಿಯಿಂದ ಅರಸೀಕೆರೆ ನಾಡಿನ ಪೋಲೀಸ್ ಉಪವಿಭಾಗ ದಲ್ಲಿ ಒಂದನ್ನು ಹೊಂದಿದೆ. ಪೋಲೀಸ್ ಸೂಪರಿಂಟೆಂಡೆಂಟ್ ಮತ್ತು ವೃತ್ತ ಪೋಲೀಸ್ ಮೇಲ್ವಿಚಾರಕ ಅಧಿಕಾರಿಗಳು ಈ ವಿಭಾಗದ ಮುಖ್ಯಸ್ಥರುಗಳಾಗಿದ್ದಾರೆ. ಈ ತಾಲ್ಲೂಕಿನಲ್ಲಿ ಏಳು ಪೋಲೀಸ್ ಠಾಣೆಗಳಿವೆ. ಅರಸೀಕೆರೆ ವೃತ್ತಕ್ಕೆ ಅರಸೀಕೆರೆ ಪಟ್ಟಣ, ಅರಸೀಕೆರೆ ಗ್ರಾಮೀಣ ಬಾಣಾವರ ಮತ್ತು ನುಗ್ಗೆಹಳ್ಳಿಗಳು ಸೇರಿವೆ.

1964 ರಲ್ಲಿ ಹೋಂಗಾರ್ಡ್ಸ್‌ಗಳ ಉಪಘಟಕವೊಂದು ಪ್ರಾರಂಭವಾಯಿತು. ಸುಮಾರು ಒಂದು ನೂರು ಮಂದಿ ಹೋಂ ಗಾರ್ಡ್ಸ್‌ಗಳು ಸಾರ್ವಜನಿಕ ರಕ್ಷಣೆ ಮತ್ತು ಶಾಂತಿಪಾಲನೆಯನ್ನು ಸಾರ್ವತ್ರಿಕ ಚುನಾವಣೆ, ದಸರಾ ಹಬ್ಬ, ನಾಡಹಬ್ಬ ಮತ್ತು ವಿಶೇಷ ಸಂದರ್ಭಗಳಲ್ಲಿ ಜನತೆಗೆ ನೆರವಾಗುತ್ತಾರೆ. ಈ ತಾಲ್ಲೂಕಿನಲ್ಲಿ 7 ಆರಕ್ಷಕ ಠಾಣೆಗಳಿರುತ್ತವೆ. ಅರಸೀಕೆರೆ ರೈಲ್ವೆ ಪೋಲೀಸ್ ಠಾಣೆ ರೈಲ್ವೆ ಆವರಣದಲ್ಲಿ ಕಾನೂನು ಮತ್ತು ಶಾಂತಿ ಪಾಲನೆಯಲ್ಲಿ ಸೇವೆ ಸಲ್ಲಿಸುತ್ತಿದೆ.

1960 ರಲ್ಲಿ ನ್ಯಾಯಾಲಯಗಳು ಸ್ಥಾಪನೆಯಾಗಿದ್ದು ಮುನ್ಸೀಫ್ ಮತ್ತು ಮ್ಯಾಜಿಸ್ಟ್ರೇಟ್ ಕೋರ್ಟುಗಳು ಸೇವೆ ಸಲ್ಲಿಸುತ್ತಿವೆ.
Sri Vidyabharathi Book Centre, Sringeri

CC-O. In Public Domain. Digitized by eGangotri

ಅರಸೀಕೆರೆ ತಾಲ್ಲೂಕಿನ ಮಂಡಲ ಪಂಚಾಯಿತಿ ವಿವರಗಳು

ಕಣಕಟ್ಟೆ ಮಂಡಲ ಪಂಚಾಯಿತಿ ಕೇಂದ್ರದ ಕಂದಾಯ ಗ್ರಾಮಗಳು :

ಕಣಕಟ್ಟೆ, ಕಿಟ್ಟಿನಕೆರೆ, ಹೊಸಹಳ್ಳಿ, ಕುಂಬಾರಗಟ್ಟ, ದಿಬ್ಬೂರು, ಯಾಚಗೊಂಡನಹಳ್ಳಿ, ದೋಣನಕಟ್ಟೆ, ಹಂಪನ ಕಟ್ಟೆ, ಬೊಮ್ಮಸಮುದ್ರ, ಬೆನ್ನಿಗುಂಡಿಹಳ್ಳಿ, ಮದ್ದರಹಳ್ಳಿ, ಶಂಕರನಹಳ್ಳಿ, ಸಾತನಗಾಗೆ, ಕಡಲಮಗ್ಗೆ, ಕೆರೆಮುಂದಿನಹಳ್ಳಿ, ಮಾಗೇನಹಳ್ಳಿ, ಕಸುವನಹಳ್ಳಿ.

ದೊಡ್ಡಮೇಟಿಕುರ್ಕೆ ಮಂಡಲ ಪಂಚಾಯಿತಿ ಕೇಂದ್ರದ ಕಂದಾಯ ಗ್ರಾಮಗಳು :

ದೊಡ್ಡಮೇಟಿಕುರ್ಕೆ, ಚಿಕ್ಕಮೇಟಿಕುರ್ಕೆ, ಮಡಲು, ಹೊಳಲ ಕೆರೆ, ಶಶಿದಾಲ, ಸೊಪ್ಪಿನಹಳ್ಳಿ, ಚಿಕ್ಕೊಂದಿಹಳ್ಳಿ, ಹರಲಕಟ್ಟ, ರಾಮಪುರ, ಎರೇಹಳ್ಳಿ.

ಕಲ್ಲುಂಡಿ ಮಂಡಲ ಪಂಚಾಯಿತಿ ಕೇಂದ್ರದ ಕಂದಾಯ ಗ್ರಾಮಗಳು :

ಕಲ್ಲುಂಡಿ, ಕಲ್ಲುಸಾದರಹಳ್ಳಿ, ಬತ್ತಿಹಳ್ಳಿ, ಕರಡಿಹಳ್ಳಿ, ಅಹಮದಾಪುರ, ಹಳ್ಳಿತಿಮ್ಮನಹಳ್ಳಿ, ಗಿರಿಬೊಮ್ಮನಹಳ್ಳಿ, ವಾಲೇಹಳ್ಳಿ, ಬೈರಾಪುರ, ಶಂಕರನಹಳ್ಳಿ (ಗರುಡನಗಿರಿ), ನರಸೀಪುರ, ಗೊಲ್ಲರಹಳ್ಳಿ, ಕನ್ನವ್ವಾ, ಸೋಮಶೆಟ್ಟಿಹಳ್ಳಿ, ಹಿರಿಸಾದರಹಳ್ಳಿ, ಹೊನ್ನಕಟ್ಟ, ನಾಗಸಮುದ್ರ, ಅರೇಹಳ್ಳಿ, ಪುರ, ಮಾದಾನಿಪುರ, ಹೊಸಹಳ್ಳಿ.

ಜಯಚಾಮರಾಜಪುರ ಮಂಡಲ ಪಂಚಾಯಿತಿ ಕೇಂದ್ರದ ಕಂದಾಯ ಗ್ರಾಮಗಳು :

CC-O. Vidyabharathi Book Centre, Sringeri

CC-O. In Public Domain. Digitized by eGangotri

ಜಯಚಾಮರಾಜಪುರ, ನಾಗವೇಡಿ, ಬೈರಾಪುರ, ದೊಡ್ಡಗಟ್ಟ, ಮಲ್ಲಾಪುರ, ಚಿಕ್ಕಿಹೈಕೂರು, ಕುರುಬರಹಳ್ಳಿ, ಬಸವನಹಳ್ಳಿ, ಮಾಲೇನಹಳ್ಳಿ, ಗೊಲ್ಲರಹಳ್ಳಿ, ಕ್ಯಾತನಹಳ್ಳಿ, ತುಂಬಾಪುರ, ಎರಿಗೇನಹಳ್ಳಿ, ಸಿಂಗೇನಹಳ್ಳಿ, ತುಡಿಕೇನಹಳ್ಳಿ, ಕಸುವಿನಹಳ್ಳಿ, ಮಲ್ಲೇನಹಳ್ಳಿ, ಹಿರೇಕಲ್‌ಕಾಡು, ರಾಮೇನಹಳ್ಳಿ, ಪಡುವಿನಹಳ್ಳಿ.

ಮಣಕತ್ತೂರು ಮಂಡಲ ಪಂಚಾಯಿತಿ ಕೇಂದ್ರದ ಕಂದಾಯ ಗ್ರಾಮಗಳು :

ಮಣಕತ್ತೂರು, ಬಾಣಾವರ ಗ್ರಾಮಾಂತರರ (ಎ), ಸರ್ವೆ ಕೊಪ್ಪಲು (ಬಿ), ಧೊಡ್ಡೇನಹಳ್ಳಿ, ಮಲ್ಲಾಪುರ, ಉಪ್ಪಿನಹಳ್ಳಿ, ಅಗ್ರಹಾರ, ಚನ್ನಾಪುರ, ಶಾನೇಗೆರೆ, ತಿಪ್ಪಗಟ್ಟ, ಗಂಜಿಗೆರೆ, ತೊಂಡಿಗಾನಹಳ್ಳಿ, ಬಾಣರಸನಹಳ್ಳಿ, ತಿಪ್ಪನಹಳ್ಳಿ, ಹನುಮನಹಳ್ಳಿ, ದೊಡ್ಡೇನಹಳ್ಳಿ, ಬೈರಾಪುರ, ಹಾರುವನಹಳ್ಳಿ, ಬಸವನಹಳ್ಳಿ, ವೆಂಕಟಾಪುರ, ಚಿಕ್ಕರೇನಹಳ್ಳಿ, ಎರೇಹಳ್ಳಿ, ಕರಡಿಹಳ್ಳಿ, ಬೈರಗೋಡನಹಳ್ಳಿ, ಚಿಕ್ಕಬಾಣಾವರ, ಬಾಗಿಲಗಟ್ಟ, ಬೇವಿನಹಳ್ಳಿ, ದೊಡ್ಡೇನಹಳ್ಳಿ, ವಡೇರಹಳ್ಳಿ, ಕೆಂಕೆರೆಹಳ್ಳಿ, ಕೆ. ಜಿ. ಅಗ್ರಹಾರ, ಲಿಂಗೋಡನಹಳ್ಳಿ.

ಕುರುವಂಕ ಮಂಡಲ ಪಂಚಾಯಿತಿ ಕೇಂದ್ರದ ಕಂದಾಯ ಗ್ರಾಮಗಳು :

ಬೆಂಡೆಕೆರೆ, ಬಸವರಾಜಪುರ, ಶಾಂತನಹಳ್ಳಿ, ಸೈದರಹಳ್ಳಿ, ಕುಮ್ಮಾರಗಟ್ಟ, ರಂಗಾಪುರ, ಕುರುಬರಹಳ್ಳಿ, ಕುರುವಂಕ, ಕೊಂಡವಾಗಿಲು, ಮೈಲಾನಹಳ್ಳಿ, ಪುರಲೆಹಳ್ಳಿ, ಸಿದ್ದಾಪುರ, ಹರತನಹಳ್ಳಿ, ಕೆಂಪುರಸಾಗರ, ಆನಂದನಹಳ್ಳಿ, ಮರುಳಸಿದ್ದನಹಳ್ಳಿ, ಮರಟಗೆರೆ, ಚಿಕ್ಕಮ್ಮನಹಳ್ಳಿ, ಬ್ಯಾಡರಹಳ್ಳಿ, ನಾಗತ್ತಿಹಳ್ಳಿ, ವೆಂಕಟಾಪುರ, ಸಿಂಕೆಕಟ್ಟೆಹಳ್ಳಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಚಿಗಟ್ಟ ಮಂಡಲ ಪಂಚಾಯಿತಿ ಕೇಂದ್ರದ ಕಂದಾಯ ಗ್ರಾಮಗಳು :

ಸೂಲದಿಮ್ಮನಹಳ್ಳಿ, ಕಂಡಿಲಿಂಗನಹಳ್ಳಿ, ಮೇದರಹಳ್ಳಿ, ಮಾಯಗೊಂಡನಹಳ್ಳಿ, ಕಾಚಿಕೆಟ್ಟ, ಕೆಂಚೇನಹಳ್ಳಿ, ಕೋರನಹಳ್ಳಿ, ಚಲುವನಹಳ್ಳಿ, ರಾಮಪುರ, ಮಾಸ್ತಿಹಳ್ಳಿ, ಸಾಲಾಪುರ, ಹಿರಿಯೂರು, ಕಣಿಹಳ್ಳಿ, ಹರಿಹರಪುರ, ತಿಮ್ಮಶೆಟ್ಟಿಹಳ್ಳಿ, ಬಿಸಲೆಹಳ್ಳಿ, ಬೈರಾಂಬುದಿ, ಚಿಕ್ಕೂರು, ಅರಕೆರೆ, ಲಾಯಲಾಪುರ, ದೇವಗೊಂಡನಹಳ್ಳಿ,

ಗೀಜೆಹಳ್ಳಿ ಮಂಡಲ ಪಂಚಾಯಿತಿ ಕೇಂದ್ರದ ಕಂದಾಯ ಗ್ರಾಮಗಳು :

ಗೀಜೆಹಳ್ಳಿ, ಯಾದಾಪುರ, ಸಂಕೋಡನಹಳ್ಳಿ, ಕಾತಿಕೆರೆ, ಅರಸೀಕೆರೆ ಗ್ರಾಮಾಂತರ (ಎ), ಕಾಲನಕೊಪ್ಪಲು (ಬಿ), ಬಣಜರ ಹಟ್ಟಿ (ಸಿ), ಗೊಲ್ಲರಹಳ್ಳಿ (ಡಿ), ಬೈರನಾಯಕನಹಳ್ಳಿ (ಇ), ಕಂತೇನಹಳ್ಳಿ, ಹಿಂಜಗೋಡನಹಳ್ಳಿ, ಜಾಜೂರು, ಕಲ್ಲನಾಯಕನಹಳ್ಳಿ, ಬೊಮ್ಮನಹಳ್ಳಿ, ಜಾವನಹಳ್ಳಿ, ತಿರುಪತಿಹಳ್ಳಿ, ಹಬ್ಬನಗಟ್ಟಕಾವಲ್, ಮುದ್ದರಂಗನಹಳ್ಳಿ, ಗುಂಡಕಾನಹಳ್ಳಿ, ಮುದ್ದನಹಳ್ಳಿ, ನಾರಾಯನಗಟ್ಟಹಳ್ಳಿ, ಮುರುಂದಿ.

ಅಗ್ಗುಂದ ಮಂಡಲ ಪಂಚಾಯಿತಿ ಕೇಂದ್ರದ ಕಂದಾಯ ಗ್ರಾಮಗಳು :

ಶಂಕರನಹಳ್ಳಿ, ಸಿಂಗನಹಳ್ಳಿ, ಸೋಮೇನಹಳ್ಳಿ, ಕೆಂಚೇನಹಳ್ಳಿ, ಕರಲಹಳ್ಳಿ, ಪುರ, ದುಮ್ಮೇನಹಳ್ಳಿ, ಚಂದಲಾಪುರ, ಹರಲಕಟ್ಟೆ, ಅಗ್ಗುಂದ, ಬೊಮ್ಮೇನಹಳ್ಳಿ, ತಿರುಪತಿಹಳ್ಳಿ, ಹರಲಕಟ್ಟೆ, ಕಾರೇಹಳ್ಳಿ, ಬಂಡಿಹಳ್ಳಿ, ಸೂಳೆಕೆರೆ, ಲಕ್ಷ್ಮೀದೇವರಹಳ್ಳಿ, ಅಡಿಹಳ್ಳಿ, ಹೊನ್ನಶೆಟ್ಟಿಹಳ್ಳಿ, ಕೆರೆಕೋಡಿಹಳ್ಳಿ, ದಾಸಿಹಳ್ಳಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾರನಹಳ್ಳಿ ಮಂಡಲ ಪಂಚಾಯಿತಿ ಕೇಂದ್ರದ ಕಂದಾಯ ಗ್ರಾಮಗಳು :

ಹಾರನಹಳ್ಳಿ, ಗುತ್ತಿನಕೆರೆ, ಮಣಿಮಾಕನಹಳ್ಳಿ, ಮಾಕನಹಳ್ಳಿ, ದೇವರಾಯಪಟ್ಟಣ, ಮೆಲದೇವಿಹಳ್ಳಿ, ಹೆಬ್ಬಾರನಹಳ್ಳಿ, ಅಣ್ಣನಾಯಕನಹಳ್ಳಿ, ವಿರೂಪುರ, ಕರಗುಂದ, ಗೊಲ್ಲರಹಳ್ಳಿ, ಬ್ಯಾಲದಕೆರೆ, ಕಮಲಾಪುರ, ಉಳವಾರೆ, ತಳ್ಳೂರು.

ಜಾವಗಲ್ ಮಂಡಲ ಪಂಚಾಯಿತಿ ಕೇಂದ್ರದ ಕಂದಾಯ ಗ್ರಾಮಗಳು :

ಜಾವಗಲ್, ಎಸ್. ಕಲ್ಲಹಳ್ಳಿ, ಕಾಮೇನಹಳ್ಳಿ, ಗುಡ್ಡೇನಹಳ್ಳಿ, ನೆರಳಿಗೆ, ಲೂಚೇನಹಳ್ಳಿ, ಬೂಚೇನಹಳ್ಳಿಕಾವಲ್, ದ್ಯಾಮೇನಹಳ್ಳಿ, ತಿಮ್ಮನಹಳ್ಳಿ, ಕೋಡಿಹಳ್ಳಿ, ಮಲ್ಲದೇವಿಹಳ್ಳಿ, ಧನಂಜಯಪುರ, ಗೋಪಗೊಂಡನಹಳ್ಳಿ, ಬೊಮ್ಮಗೋಡನಹಳ್ಳಿ, ಅತ್ತಿಗುಡ್ಡಕಾವಲ್, ದೊಡ್ಡಗಟ್ಟ, ಲಿಂಗಲಾಪುರ.

ಕೋಳಕುಂದ ಮಂಡಲ ಪಂಚಾಯಿತಿ ಕೇಂದ್ರದ ಕಂದಾಯ ಗ್ರಾಮಗಳು :

ಚಿಕ್ಕಜ್ಜಕಟ್ಟಿಹಳ್ಳಿ, ಚಿಕ್ಕಲಿಂಗನಹಳ್ಳಿ,ಮಾರಗೋಡನಹಳ್ಳಿ, ಕೆಳಗಿನ ಹೊಸೆಹಳ್ಳಿ, ಮೇಲಿನ ಹೊಸಹಳ್ಳಿ, ತಾವರೆಹಳ್ಳಿ, ಬೆಳವಳ್ಳಿ, ಸಾವಂತನಹಳ್ಳಿ, ಎಸ್.ದಿಗ್ಗೇನಹಳ್ಳಿ, ನರಸೀಪುರ, ಮೊಸಳೆ, ಕೋಳಗುಂದ, ಬೈರಾಪುರ, ತಿಮ್ಮಲಾಪುರ, ಮಾವುತನಹಳ್ಳಿ, ಬೊಮೇನಹಳ್ಳಿ, ಉಪ್ಪರಕಾಳೇನಹಳ್ಳಿ, ಮಾದನಹಳ್ಳಿ, ತಿರುಪತಿಹಳ್ಳಿ, ಕೆಂಗಾನಹಳ್ಳಿ, ಸಿಂಗನಹಳ್ಳಿ, ನೀಲಗಿರಿಕಾವಲ್, ಸೋಮಾಪುರ, ಮಟದ ಹೊಸಹಳ್ಳಿ, ಸಂಕಿಹಳ್ಳಿ.

ಬೆಳಗುಂಬ ಮಂಡಲ ಪಂಚಾಯಿತಿ ಕೇಂದ್ರದ ಕಂದಾಯ ಗ್ರಾಮಗಳು :

Sri Vidyabharathi Book Centre, Sringeri

 CC-O. In Public Domain. Digitized by eGangotri

ಕುಣಿಗಟ್ಟಹಳ್ಳಿ, ಹೊನ್ನೇನಹಳ್ಳಿ, ಕೆಳ್ಕೆಂಗೆರೆ, ಹುಣಸಿಕಟ್ಟೆ, ಮೈಲಾನಹಳ್ಳಿ, ಸಾಲಾಪ್ರಹಳ್ಳಿ, ಅಣ್ಣೇನಹಳ್ಳಿ, ರಂಗಪುರ ಕಾವಲ್–1, ತಿಪ್ಪನಹಳ್ಳಿ, ತಿಮ್ಮಲಾಪುರ, ಬೆಳಗುಂಬ, ಅಜ್ಜನ ಹಳ್ಳಿ, ಚಲ್ಲಾಪುರ, ತಳಲತೊರೆ, ಕಲ್ಕೆರೆ, ಗೊಲ್ಲರಹಳ್ಳಿ, ರಂಗಪುರಕಾವಲ್–2, ಸಂಕ್ಲಾಪುರ, ಪೊನ್ನಸಮುದ್ರ, ಅನ್ನಾಪುರ, ಜೋತಿಮ್ಮಲಾಪುರ, ಟಿ.ಕೋಡಿಹಳ್ಳಿ, ಹೆಬ್ಬನಗಟ್ಟ.

ಉಂಡಿಗಣಲು ಮಂಡಲ ಪಂಚಾಯಿತಿ ಕೇಂದ್ರದ ಕಂದಾಯ ಗ್ರಾಮಗಳು :

ಹಂದ್ರಾಳು, ದೇವಿಹಳ್ಳಿ, ಉಂಡಿಗಣಲು, ದೇಶಾಣಿ, ಕುರಡಹಳ್ಳಿ, ಡಿ. ಕಲ್ಲಹಳ್ಳಿ, ಮುದನಹಳ್ಳಿ, ಗೋವಿಂದಾಪುರ, ಮಾದಾಪುರ, ಕೆ. ಎಗ್ಗೇನಹಳ್ಳಿ, ಸಿಂಗಟಗೆರೆ, ಚಿಕ್ಕಲಿಂಗನಹಳ್ಳಿ, ಹಳೆಕಲ್ಯಾಡಿ, ವಡೇರಹಳ್ಳಿ, ನಾಯಕನಕೆರೆ, ಕಲ್ಯಾಡಿ, ವೃಂದಾವನ ಹಳ್ಳಿ, ಹರಳಹಳ್ಳಿ, ಕುರುಚರಹಳ್ಳಿ, ಪಾಂಡೂರು.

ಬಾಗೇಶಪುರ ಮಂಡಲ ಪಂಚಾಯಿತಿ ಕೇಂದ್ರದ ಕಂದಾಯ ಗ್ರಾಮಗಳು :

ರಂಗೇನಹಳ್ಳಿ, ರಂಗಪುರ ಕಾವಲ್, ರಂಗಾಪುರ, ರಂಗೇನ ಹಳ್ಳಿ, ರಂಗಾಪುರ ಕಾವಲ್, ಮುತ್ತಿಕೆರೆ, ಕಮ್ಮಾರಗಟ್ಟ, ಕಡೇ ಹಳ್ಳಿ, ಹೊಸಹಳ್ಳಿ, ರಾಮ್‌ಜಿಹಳ್ಳಿ, ನೀರಗುಂದ, ಬಿಲೇನಹಳ್ಳಿ, ಅಪ್ಪೇನಹಳ್ಳಿ, ಬಾಗೇಶಪುರ, ಜೀನಕೆರೆಹಳ್ಳಿ, ನಾಗತ್ತಿಹಳ್ಳಿ, ಚಿಟ್ಟನಹಳ್ಳಿ, ಈಸುವನಹಳ್ಳಿ, ಚೀಲನಹಳ್ಳಿ, ಕಣ್ಣೇನಹಳ್ಳಿ, ಜೋಗನಹಳ್ಳಿ, ಆದಿಹಳ್ಳಿ, ಬಿ. ಹೊಸಹಳ್ಳಿ, ನಂದಿಹಳ್ಳಿ, ಮಂಚೇನಹಳ್ಳಿ, ಮಹದೇವರಹಳ್ಳಿ, ಜಡಗಟ್ಟ, ಬೆಳವತ್ತಹಳ್ಳಿ, ದೊಡ್ಡೇನಹಳ್ಳಿ, ನಾಗೇನಹಳ್ಳಿ.

ಗಂಡಸಿ ಮಂಡಲ ಪಂಚಾಯಿತಿಯ ಕಂದಾಯ ಗ್ರಾಮಗಳು : Sri Vidyabharathi Book Centre, Sringeri

CC-O. In Public Domain. Digitized by eGangotri

ಮುದುಡಿ, ಹಲೇಗಾನಹಳ್ಳಿ, ಬಿಸಲೇಹಳ್ಳಿ, ಕಮ್ಮಾರಗಟ್ಟ, ಬೋರೆಹಳ್ಳಿ, ಬೋಚೇನಹಳ್ಳಿ, ಜೋಬಿಗಾನಹಳ್ಳಿ, ಜೀಕಾನಹಳ್ಳಿ, ದಾಸೇನಹಳ್ಳಿ, ಚಿಕ್ಕಗಂಡಸಿ, ಗಂಡಸಿ, ಮಂಗಲಾಪುರ, ಗೊಲ್ಲರ ಹಳ್ಳಿ, ಹುರಿಗಲ್ಲವಾಡಿ, ಹೊನ್ನೇನಹಳ್ಳಿ, ಹೆಗ್ಗಟ್ಟ, ಗುಂಡಕಲ್ಲನ ಹಳ್ಳಿ.

ಕೆಂಕೆರೆ ಮುಂಡಲ ಪಂಚಾಯಿತಿಯ ಕಂದಾಯ ಗ್ರಾಮಗಳು :

ಮಲ್ಲೇನಹಳ್ಳಿ, ಶಿವರಪು ಮಡುವನಹಳ್ಳಿ, ಸಣ್ಣೇನಹಳ್ಳಿ, ಸೋಮೇನಹಳ್ಳಿ, ಜಲಗಾರನಹಳ್ಳಿ, ಚನ್ನೈಕಾನಹಳ್ಳಿ, ಹುಲ್ಲೆಕೆರೆ, ನರಮ್ಮನಹಳ್ಳಿ, ಗುಡ್ಡೇನಹಳ್ಳಿ, ಲಕ್ಕಹಳ್ಳಿ ಕಾವಲ್, ಬಾಗೂರ ಹಳ್ಳಿ, ಬಾಗಿವಾಲು, ಮರಶೆಟ್ಟಿಹಳ್ಳಿ, ಉಗ್ರಾಣಹಳ್ಳಿ, ಕೆರಕೆರೆ, ಮಲ್ಲಾಪುರ, ಬಿದರೆಕಾವಲ್, ಮಂಗಳಾಪುರ, ಕರಿಮಾರನಹಳ್ಳಿ, ಆಲದಹಳ್ಳಿ.

ಲಾಲನಕೆರೆ ಮಂಡಲ ಪಂಚಾಯಿತಿ ಕೇಂದ್ರದ ಕಂದಾಯ ಗ್ರಾಮಗಳು :

ಜಕ್ಕನಹಳ್ಳಿ, ವಡಗಾರಹಳ್ಳಿ, ಲಿಂಗಾಪುರ, ಕೋಡೇನಾಲು, ಬಂಡಿಹಳ್ಳಿ, ಹಿರಿಹಾಲು, ಹಿರಿಸಮುದ್ರ, ತಿಮ್ಮಲಾಪುರ, ಬಸವನ ಪುರ, ಎರಗಣಲು, ದೊಡ್ಡ ಎರಗಣಲು, ಲಾಲನಕೆರೆ, ಹೊನ್ನೇನ ಹಳ್ಳಿ, ಚಗಚಗೆರೆ, ಕುಮರಗುಂಡಿ, ಮಂಚೇನಹಳ್ಳಿ, ನಾಗರಹಳ್ಳಿ, ಚನ್ನಾಪುರ, ಬೊಮ್ಮಟೆಹಳ್ಳಿ, ಶಿಂಗೇನಹಳ್ಳಿ, ಹೊನ್ನಕುಮ್ಮನ ಹಳ್ಳಿ.

ಅಭಿವೃದ್ಧಿ ಕಾರ್ಯಗಳು

ಅರಸೀಕೆರೆ ತಾಲ್ಲೂಕಿನಲ್ಲಿ ತೆಂಗಿನ ನಾರಿನ ಕೈಗಾರಿಕೆಗಳ ಅಭಿವೃದ್ಧಿಗೆ ಗಮನ ಹರಿಸಲಾಗಿದೆ. ಹಾಗೆಯೇ ತಾಲ್ಲೂಕಿನ ಮುಖ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೆಳೆಯಾಗಿದೆ. ರಾಗಿ ಮಾಲ್ಟ್ ತಯಾರಿಕೆಯ ಘಟಕವನ್ನು ಆರಂಭಿಸುವಲ್ಲಿ ಯತ್ನಿಸಬಹುದಾಗಿದೆ.

1984–85ರ ವೇಳೆಗೆ ಉಪಗ್ರಾಮಗಳೂ ಸೇರಿದಂತೆ 324 ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯ ಒದಗಿಸಲಾಗಿದೆ. 669. ಕಾರ್ಯಗತವಾದ ಪಂಪ್‌ಸೆಟ್ಟುಗಳು ಇವೆ, 110 ನ್ಯಾಯಬೆಲೆ ಅಂಗಡಿಗಳಿದ್ದು ನಾಗರಿಕರಿಗೆ ಪಡಿತರ ಪದ್ಧತಿಯ ಮೇರೆಗೆ ಆಹಾರ ಸಾಮಗ್ರಿಗಳನ್ನು ಪೂರೈಸಲಾಗುತ್ತಿದೆ. ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಈ ತಾಲ್ಲೂಕಿನಲ್ಲಿ 4,306 ಕುಟುಂಬಗಳನ್ನು ಗುರುತಿಸಲಾಗಿದ್ದು, 1,781 ಕುಟುಂಬಗಳು ಆರ್ಥಿಕ ನೆರವು ಪಡೆದಿವೆ. ವಸತಿಹೀನರಿಗೆ, ನಿವೇಶನ ರಹಿತರಿಗೆ ವಸತಿ ಹಾಗೂ ನಿವೇಶನಗಳನ್ನು ಒದಗಿಸಲಾಗುತ್ತಿದೆ. ನೀರಾವರಿ ಬಾವಿಗಳನ್ನು ತೋಡಿ ಕೃಷಿ ಅಭಿವೃದ್ಧಿಗೆ ಯತ್ನಿಸಲಾಗಿದೆ. ಕೃಷಿ ಸಾಲ ನೀಡಿಕೆ ಸಹಕಾರಿ ಸಂಘಗಳು ರೈತ ಜನರಿಗೆ ಅಲ್ಪಾವಧಿ ಹಾಗೂ ಮಧ್ಯಮಾವಧಿ ಸಾಲವನ್ನು ನೀಡಿ ಪ್ರೋತ್ಸಾಹಿಸುತ್ತಿವೆ.

ಈ ತಾಲ್ಲೂಕಿನಲ್ಲಿ ಇನ್ನಷ್ಟು ಅಭಿವೃದ್ಧಿ ಕಾರ್ಯಗಳು ನಡೆಯಬೇಕಾಗಿವೆ. ತಾಲ್ಲೂಕಿನ ರಸ್ತೆಗಳನ್ನು ಉತ್ತಮಪಡಿಸುವ, ಬಸ್‌ನಿಲ್ದಾಣಗಳಲ್ಲಿ ಸೌಲಭ್ಯ ಹೆಚ್ಚಿಸುವ ಕೆಲಸ ಆಗಬೇಕಾಗಿರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅರಸೀಕರ ತಾಲ್ಲೂಕಿನ ಸ್ಥೂಲನೋಟ

ವಿಸ್ತೀರ್ಣ	1227.24 ಚ.ಕಿ.ಮೀ
ಜನಸಂಖ್ಯೆ	2,55,226
ಗಂಡಸರು	1,29,667
ಹೆಂಗಸರು	1,25,559
ಹರಿಜನರು	41,272
ಗಿರಿಜನರು	3063
ವಾರ್ಷಿಕ ಸರಾಸರಿ ಮಳೆ	487.7
ಹೋಬಳಿಗಳು	5
ಜನವಸತಿ ಇರುವ ಗ್ರಾಮಗಳು	332
ಜನವಸತಿ ಇಲ್ಲದ ಗ್ರಾಮಗಳು	37
ಮಂಡಳ ಪಂಚಾಯಿತಿಗಳು	18
ಅರಣ್ಯ	15,049 ಹೆಕ್ಟೇರುಗಳು
ಶಿಶುವಿಹಾರಗಳು	16
ಕಿರಿಯ ಪ್ರಾಥಮಿಕ ಶಾಲೆಗಳು	254
ಹಿರಿಯ ಪ್ರಾಥಮಿಕ ಶಾಲೆಗಳು	116
ಪ್ರೌಢಶಾಲೆಗಳು	46
ಕಾಲೇಜುಗಳು	9
ಪಾಲಿಟೆಕ್ನಿಕ್‌ಗಳು	—
ತಾಂತ್ರಿಕ ಶಿಕ್ಷಣ ಶಾಲೆಗಳು	—
ಎಲ್ಲ ವಿಧದ ಸಹಕಾರ ಸಂಘಗಳು	118
ನೋಂದಾಯಿತ ಕೈಗಾರಿಕೆಗಳು	14
ನಿಯಂತ್ರಿತ ಮಾರುಕಟ್ಟೆಗಳು	5
ಅಂಚೆ ಕಛೇರಿಗಳು	72
ತಂತಿ ಕಛೇರಿಗಳು	11
ಚಲನಚಿತ್ರ ಮಂದಿರಗಳು (ಸಂಚಾರಿ ಸೇರಿ)	7
ಪೋಲೀಸ್ ಠಾಣೆಗಳು (ಔಟ್‌ಪೋಸ್ಟ್ ಸೇರಿ)	10
ವಾಣಿಜ್ಯ ಬ್ಯಾಂಕುಗಳು	22
ಸಹಕಾರಿ ಬ್ಯಾಂಕುಗಳು	6
ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕು	1

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ನಾಟಕ ಪ್ರಗತಿಯ ಮುನ್ನಡೆ

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು-560 009

Bhavabharathi Book Centre, Sringeri